# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIII - 11 ನವೆಂಬರ್ 2005

ಈ ಸಂಚಿಕೆಯಲ್ಲಿ

ಅಸೋಸಿಯೇಶನ್‌ನಲ್ಲಿ

Shringara in Carnatic Music • **Jyoti Mohan** 2

Dr. S.S.Badrinath presented the Dadabhai Naoroji Memorial Award for 2004 4

ಪಂಢರಪುರದಲ್ಲಿ ಕರ್ನಾಟಕದ ವಿಠ್ಠಲ • ಡಾ. ಜಿ.ಎನ್. ಉಪಾಧ್ಯ 5

ಸಂಕಲ್ಪ ಮತ್ತು ನಿರ್ಧಾರ • ವಾಸುದೇವ ಕಾಣೆಮಾರ್ 8

*Book Review* • **M.A.N. Prasad** 10
Listen Janamejaya and other Plays
Nanna Nalla - My Beloved

SUBHAASHITAANI • **Mrs. Janaki S. Mani** 11

ಸುತ್ತಮುತ್ತ 12


Rs. 5/-

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

# SHRINGARA IN CARNATIC MUSIC

- *Jyoti Mohan*

The recently concluded conference on "Sringara in Carnatic Music", hosted by the Mysore Association, Mumbai, on the



*The Governor being received at the Association*

5th and 6th November 2005, at their auditorium, featured eminent scholars, musicians and choreographers from Karnataka and Tamil Nadu, besides the leading Gurus of Mumbai, who participated in the panel discussion.

After the formal inauguration of the conference by the Honourable Governor of Maharashtra, His Excellency Shri S.M. Krishna, Dr. V. V. Srivatsa – the eminent scholar, musicologist and composer– delivered the keynote address.

The first lecture demonstration was by Dr. Ritha Rajan on Sringara in Padams and Javalis of the traditional Madras and Thanjavur schools. Blessed with a melodious voice and trained in the art of *Padam* singing from no less than the members of the Veena Dhanammal family and her own grandmother, she elaborated on the beauty and grandeur of *Padams* of Kshetrayya, Sarangapani among others. She emphasised that *sahitya* of a *pada* alone cannot reveal the mood of the *nayika* or *nayaka*. It is the rich music woven into the *pada* that brings out the sentiment forcefully. Hence, *Padam* singing is a very difficult art and not many venture to render a *Padam* in a concert.

She also demonstrated very lucidly how the heavy and ponderous *Padam* differed from the lilting, briskly rendered *Javali*. Taking a *Padam* and a *Javali* in Bhairavi, she demonstrated to the *rasikas* the difference between the two. She concluded her lecture demonstration by playing a beautiful rendition by Brindamma, which was a rare feast for music lovers assembled there.



*Governor Shri. S.M. Krishna being greeted with aarati*




*Shri S. Doreswamy President of Mysore Association honoring His Excellency Shri S.M. Krishna, the Governor of Maharashtra*

This scholarly presentation was followed by a dance recital by B. Bhanumati and her troupe from Bangalore. The recital, starting with a *Pushpanjali* in Hamsadhwani and ending with the *Thillana* in Raga Valachi was a visual delight. Brilliant choreography, perfect synchronisation and sheer poetry in movement had the audience spellbound. Interspersed between fast-paced group *nritta* items, were slow *padams* rendered beautifully by Bhanumati. Jagadhodharana of Purandaradasa, Idene Sakhi and "Azun Nahi Zagi Radha", a Marathi composition highlighting Kubja's love for Krishna, were portrayed by her with great dignity and finesse.

The second day began with a panel




*Mysore Subramany, S. Doreswamy - President of Association, Shri S.M. Krishna - Governor of Maharashtra, V.V. Srivatsa & M.A.N. Prasad at the inaugural function*

discussion, where Guru K. Kalyanasundaram of the Rajarajeshwari Bharata Natya Kala Mandir was the chairperson. The speakers– Prof. Nagamani Srinath of Mysore, Dr. Ritha Rajan of Chennai, Director of Natya Kalamandiram (Bangalore) B. Bhanumati and Guru Rajee Narayan of Nritya Geetanjali (Mumbai) shared their experiences and observations, and also answered questions fielded by the audience. Guru K. Kalyanasundaram spoke about *Padams* and *Javalis* and also about why they are not seen in many dance recitals today. Mysore V. Subramanya, who anchored the conference proceedings both days, added his contribution in the form of observations and anecdotes pertaining to the topic on hand.

This was followed by a lecture-demonstration by Prof. Nagamani Srinath of Mysore, who threw light on the *Sringara Geya* composition of Karnataka, ably assisted by her very talented little pupil Master Varun. From her presentation, the difference between *Padam* singing of the Tamil Nadu and Mysore schools was very evident. She demonstrated several *Sringara Geya* compositions of Haridasas like Purandaradasa, Vyasaraya, Sripadaraya, to name a few. She spoke briefly of the composition of D.V. Gundappa, Kuvempu, D.R. Bendre, due to paucity of time.

The post-lunch session was a demonstration of *Abhinaya* of *Padams* and *Javalis* in the traditional Mysore school of dance by B. Bhanumati of Bangalore. Trained by the legendary Padmabhushan Dr. K. Venkatalakshamma, Bhanumati started her lecture demonstration with a *Choornika* dedicated to Goddess Saraswati. The *Choornika* is a *shloka*-like composition rendered in a single *ragam* without repetition of any of the lines– a feature exclusive to the Mysore school. After the devotional offering, she touched on the *Poorva Ranga Vidhi*– yet another dance number piece unique to the Mysore school, which is performed in lieu of the *Alarippu* of the Tamil schools of dance. This also contains lyrics singing the glory of a diety. She elaborated about *Kanda padyas*, which form a prelude to the *Javalis* and again peculiar to the Mysore school. She sang the Kannada *Javali* of Bangalore *Nagaratnamma* - Maatadabaaradeno, which was beautifully performed by her student.

She spoke about *Amarashataka shlokas*, which are performed as a prelude to a a *Padam*. She performed one such shloka, in which the *Nayaka* describes the grief-stricken *Nayika's* state on being told of his imminent departure. This was followed by *Bhaamaro*, wherein the *Nayika* feels dejected that there is no word about the well being of her beloved. Bhanumati mentioned that Dr. Venkatalakshamma would portray the transition between Nayaka and Nayika only with movements of her upper body and face (while being seated) very vividly– such was the greatness of her Abhinaya. Another exclusive feature of the Mysore school is the rendition of a *shloka* preceding an *Ashtapadi*– a suitable *shloka* was followed by Nath Hare, which she performed very poignantly. Thanking her mentor Dr. K. Venkatalakshamma, Bhanumati ended her educative talk on the Abhinaya of the Mysore school.

The proceedings were summed up by Mysore V. Subramanya, who also described the Jodi mela of Malavalli Sundaramma and Jatti Tayamma, and also described how dance was performed at the palace in those days and also spoke at length of his association with Dr. K. Venkatalakshamma.

Shri M. A. N. Prasad, Hon. Secretary of the Mysore Association, proposed a vote of thanks. The evening's concert by Prof. Nagamani Srinath brought the conference to an end enriching the lives of those who attended it. Kudos to the Mysore Association for their laudable effort.

***

**The Mysore Association, Bombay**

**FORTHCOMING PROGRAMME**

On Saturday, 24th December 2005
At 7.00 pm
Sri Soundarya Laya
A Unique blend of rhythm with melody
Composed & Orchestrated by
**Sri S. Shankarnarayanan** – Mridangam
**Sri. B. Anantharaman** – Violin
*Co-Artists :*
**Sri. Dhimant Varman** - Sitar
**Sri. Pravin Karkere** - Tabla
**Sri. Sriram Gopalkrishnan** - Ghatam
**Sri. P.N. Gopalan** - Moorsing
**Smt. Hema Balasubramanian**- Flute

***Venue :***
The Mysore Association Auditorium
393, Bhaudaji Road, Matunga,
Mumbai-400 019

*All are cordially invited.*

*December 2005 issue of Nesaru will be a Special Issue on "Shringara in Carnat in Music" & will carry a detailed coverage of the conference held on 5th & 6th November 2005*

*-Editor*

# Dr. S.S.Badrinath presented the Dadabhai Naoroji Memorial Award for 2004

Dr.S.S.Badrinath, the Founder Chairman of Shankara Netralaya, Chennai was presented the Dadabhai Naoroji Memorial Award for 2004, at a function held at the Mysore Association Auditorium, on Saturday the 22nd October 2005. The function was organized by the Trust of Dadabhai Naoroji Memorial Prize Fund. Dr. Badrinath was chosen for the award for advancing the interest of India in the field of



Medical Technology related to eye diseases. The award which consists of a cheque for Rs.1 lac, a Silver Salver, Citation and a book on Dadabhai Naoroji by R.P.Masani was presented by His Excellency Shri. S.M. Krishna, the Governor of Maharashtra.

When Dadabhai Naoroji passed away in 1917, the citizen of Bombay raised a memorial fund to install a statue of his in Bombay as a tribute to the outstanding leadership he had provided to the cause of India's freedom movement. After installing a magnificent statue at Flora Fountain, an amount of Rs.45,000/- was left, which with the interest accumulated there on, formed the corpus of the Dadabhai Naoroji Memorial Prize Fund. This Trust, which was formed in 1929, had Mr. Dinsha Wacha as its first Chairman. Presently Mr. Adi B. Godrej is its Chairman and other Trustees are Mr.J.G.Kanga, Mr. M.V.Kamath, Mr. Anand G. Mahindra, Ms. Bachi Karkaria and S.Divakara.

The programme began with members of the Mysore Association - Rama Vasanth, Bharathi Prasad, Shyamala Radesh and Pushpa Rao - singing the National Anthem. Mr. Adi. B. Godrej, the Charman of the Trust welcoming the gathering said that while many eminent personalities had been conferred this award so far, it had not gone to any person from the field of medicine. With the selection of Dr. Badrinath for the award, the field of medicine has also been covered by the recipients of this award. Mr.J.G.Kanga read out the citation of the award after which the award was presented to Dr. Badrinath by the Governor Shri.S.M.Krishna.

Accepting the award, Dr. Badrinath said that the focus of the award was for the role of technology and went on to explain how they had utilized the technology in providing care for eye diseases. He also touched upon the role played by his institution in terms of spreading awareness and conducting research.

The Governor Shri. S.M.Krishna in his address touched upon the need for integrating modern technology in our activities so as to make them better, have a wider reach and be effective. He praised the services rendered by Dr.Badrinath's organization and said that he saw divinity in the work carried out by him.

This was followed by the singing of National Anthem once again and then a vote of thanks by Shri.S.Divakara. After the formal function was over, tea was served on the terrace. In all it was a clean and crisp function.





## MATRIMONIAL

Wanted South Indian Brahmin Girl (Preferably Kannadiga) for Smartha Brahmin Boy-35 years –B.Com. & Diploma in Computer and Financial Management – Accounts Officer in private company – Rs. 11000/- p.m. – Tall (5 ft. 9 inch). Wheat complexion – Graduate working girl preffered vadula gothra Shatabhisa star.
Contact : Shri N. Venataramianh
022-25231414

***

Smartha Sankethi Hindu Brahmin girl MBA Marketing, Bank Employed, 26 years/ 5'2", slim, fair, Bhardwaja, Rohini seeks well qualified settled Brahmin boys - Call Mr. M.N. Nagraj 2554 6010 / 98920 90307 (Mumbai)

***

For a Smartha Kannada Brahmin girl, 27 years, 5'3" Kaushika Gotra, Kritika Nakshatra, B.Com, C.A. Computer Literate, working in Wockhardt Ltd., Mumbai. Alliance invited from professionally qualified. Well employed, Kannada Brahmin boy.
Contact: Mr. N.S. Begoor
Tel. No. 2895 0511

***

Match for a smart Kannada Brahmin girl around 25 years of age. Working in reputed Chemical Lab. Alliance invited from Brahmin boy height, 5'10" qualified working Engineering / C.A. boy working in and around Mumbai. Age 28 (around)
Contact: Mr. Uday Kokatnur
Tel. No. 95251 247 6657

# ಪಂಡರಪುರದಲ್ಲಿ ಕರ್ನಾಟಕದ ವಿಠ್ಠಲ

ಭಾಗ - 9

- ಡಾ. ಜಿ.ಎನ್. ಉಪಾಧ್ಯ

ಮಹಾರಾಷ್ಟ್ರದ ಪ್ರಸಿದ್ಧ ವಷಭ ಕೇಂದ್ರಗಳಲ್ಲಿ ಪಂಡರಾಪುರವೂ ಒಂದು. ಪಂಡರಪುರಾಪುರದ ವಿಠಲ ಕನ್ನಡ ದೇವತೆ: ಪಂಡರಾಪುರ ಮೂಲತಃ ಕನ್ನಡ ಪ್ರದೇಶ ಎಂಬ ಮಾತನ್ನು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಮರಾಠಿ ಸಾಹಿತ್ಯದಲ್ಲಿಯೂ ವಿಠ್ಠಲ ಕನ್ನಡದವೆಂಬ ಎಂಬ ವಿವರವೂ ಬಂದಿದೆ. ಜ್ಞಾನದೇವ ತನ್ನ ಜ್ಞಾನೇಶ್ವರಿಯಲ್ಲಿ 'ಕಾನಡಾ ಹೋ ವಿಠ್ಠಲ ಕರ್ನಾಟಕು' ಎಂದಿರುವನ ಪಂಡರಪುರ ಕನ್ನಡ ಕ್ಷೇತ್ರ ಎಂಬ ಉಲ್ಲೇಖವೂ ಅದೆ ಪದ್ಯದಲ್ಲಿ ಬಂದಿದೆ. 1159ರ ಹೊಯ್ಸಳರ ಒಂದು ದಾಸನದಲ್ಲಿ ದೊರೆ ಸೋಮೇಶ್ವರ ವಿಠ್ಠಲನಿಗೆ ದತ್ತಿದಾನ ನೀಡಿದ ವಿವರ ದಾಖಲಾಗಿದೆ. ಅಲ್ಲದೆ ಪಂಡರಗೆಯ ಶ್ರೀ ವಿಠ್ಠಲ ದೇವ ಎಂಬ ಉಲ್ಲೇಖವೂ ಬಂದಿದೆ.

ಮರಾಠಿಯ ಪ್ರಸಿದ್ಧ ಸಂಶೋಧಕ ರಾಮಚಂದ್ರ ಚಿಂತಾಮಣಿ ಢೇರೆ ಅವರು ''ಪಂಢರಪುರ ಎಂಬ ಕ್ಷೇತ್ರದ ಮೂಲ ಕನ್ನಡ ಹೆಸರು ಪಂಡರಗೆ. ವಿಠ್ಠಲ ಮಂದಿರದ ಹದಿನಾರು ಕಂಬಗಳ ಮಂಟಪದ ತೊಲೆಯ ಮೇಲಿದ್ದ ಹೊಯ್ಸಳ ನೃಪತಿ ಸೋಮೇಶ್ವರನ ಶಿಲಾ ಲೇಖದಲ್ಲಿ (ಶಕ 1159) ಈ ಗ್ರಾಮನಾಮದ ಉಲ್ಲೇಖವಿದೆ. ಈ ಪಂಡರಗೆಯಿಂದಲೇ ಪಾಂಡುರಂಗನೆಂಬ ದೇವನಾಮ, ಪಾಂಡುರಂಗ - ಪಂಢರಪುರ - ಪಂಢರಿ ಎಂಬ ಕ್ಷೇತ್ರನಾಮದಿಂದಾಗಿದೆ. ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಒಟ್ಟಿನಲ್ಲಿ ಪಂಡರಿಗೆ ವಿಠಲದೇವತೆಯ ಗ್ರಾಮ ಎಂಬುದರಲ್ಲಿ ಎರಡು ಮಾತಿಲ್ಲ.

ಶ್ರೀ ವಿಠಲ ಒಂದು ಮಹಾಸಮನ್ವಯ, ಅನುವಾದ ಚಂದ್ರಕಾಂತ ಪೋಕಳೆ - 2002 ಪುಟ xviii

ಕರ್ನಾಟಕದ ದಾಸರು ಮಹಾರಾಷ್ಟ್ರದ ಸಂತರು ಪಂಡರಪುರದ ವಿಠ್ಠಲನ ಪರಮ ಭಕ್ತರಾಗಿದ್ದರು. ''ಕರ್ನಾಟಕದ ಹರಿದಾಸರು ವಿಠ್ಠಲ ಭಕ್ತರಾಗಿದ್ದರು. ಪುರಂದರ ವಿಠ್ಠಲ ಭಕ್ತರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಮಹಾಕ್ಷೇತ್ರವಾಗಿತ್ತು. ಕರ್ನಾಟಕದಂತೆ ಮಹಾರಾಷ್ಟ್ರದಲ್ಲಿಯೂ ಜ್ಞಾನೇಶ್ವರನಿಂದ ಮೊದಲುಗೊಂಡು ಸಂತರೆಲ್ಲ ಪಂಡರಪುರದ ಕಡೆಗೆ ಆಕರ್ಷಿತರಾಗಿದ್ದರು. ಜ್ಞಾನೇಶ್ವರ ಮೊದಲಾದ ಸಂತರ ವರ್ಣನೆಯ ಮೇರೆಗೆ ಈ ಕ್ಷೇತ್ರ ಆ ಕಾಲಕ್ಕೆ ಕರ್ನಾಟಕದಲ್ಲಿತ್ತೆಂದು ಕಾಣುತ್ತದೆ. ಜೋಶಿ, ಶಂಬಾ 1990. ಪುಟ 227) ಮರಾಠಿ ಸಂತ ಸಾಹಿತ್ಯದಲ್ಲಿ ಭಾನುದಾಸನು ವಿಠಲ ಮೂರ್ತಿಯನ್ನು ವಿಜಯನಗರದಿಂದ ಪಂಡರಾಪುರಕ್ಕೆ ಒಯ್ದನೆಂಬ ವಿವರ ಸಿಗುತ್ತದೆ. ಇಂದಿಗೂ ಪಂಡರಾಪುರಕ್ಕೆ ಒಯ್ದನೆಂಬ ವಿವರ ಸಿಗುತ್ತದೆ. ಇಂದಿಗೂ ಪಂಡರಾಪುರಕ್ಕೆ ಒಯ್ದನೆಂಬ ವಿವರ ಸಿಗುತ್ತದೆ. ಇಂದಿಗೂ ಪಂಡರಾಪುರಕ್ಕೆ ಕರ್ನಾಟಕದಿಂದಲೂ ವಾರಕರಿಗಳು ಬಂದು ಹೋಗುವುದನ್ನು ನೋಡಬಹುದು.

ಚಾಂಡರಸಕೃತ ಹಾಗೂ ದಶಕುಮಾರ ಚರಿತ್ರೆ.ಯಲ್ಲಿ ನಳಚಂಪುನಲ್ಲಿ ವಿಠ್ಠಲನ ವರ್ಣನೆ

ಕನ್ನಡ ಚಂಪೂ ಕವಿಗಳಲ್ಲಿ ಚೌಂಡರಸನೂ ಒಬ್ಬ. ಆತನ ಪ್ರಸಿದ್ಧ ಕೃತಿ ನಳಚಂಪೂ. ಈತನ ಕಾಲ ಕ್ರಿ.ಶ. ಸು 1240. 775 ಪದ್ಯಗಳಿರುವ ಈ ಚಂಪೂ ಕಾವ್ಯ ನಳ-ದಮಯಂತಿಯರ ಕತೆಯನ್ನು ಒಳಗೊಂಡಿದೆ. ಚೌಂಡರಸ ಕೃತ ನಳ ಚಂಪು : ಸಂ ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಎಸ್. ಎನ್. ಕೃಷ್ಣ ಜೋಯಿಸ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು 1971. ಈ ಕಾವ್ಯದಲ್ಲಿ ಕವಿ ಚೌಂಡರಸ ಪಂಡರಪುರದ ವಿಠಲನನ್ನು ಸ್ತುತಿಸಿದ್ದಾನೆ. ಆ ಪದ್ಯ ಇಂತಿದೆ.

ಶ್ರೀ ಸತಿ ತನ್ನ ಪೇರುರಮನಾವಗಮಪ್ಪಿರಲಂಘ್ರಿಯಂ
ಧರಿ
ತ್ರೀ ಸತಿ ಸಾರ್ದಿರಲ್ ಕದನ ಮೋಹನ ಕೇಳಿಯನೊಲ್ದು
ಸತ್ಯಭಾಮಾ ಸತಿ ಪೆರ್ಚಿಸಲ್ ಸೊಬಗುವೆತ್ತು ಜಗತ್ಪತಿ
ತನ್ನ ಮಾನಸೋ
ಲ್ಲಾಸದಿನೆಲ್ಲರಂ ಪೊರೆಗೆ ಮಂಗಳ ಮೂರ್ತಿಯಭಂಗ
ವಿಟ್ಠಲಂ'' - ೧.

ಪಂಡರಪುರದ ವಿಠ್ಠಲನನ್ನು ಪಾಂಡುಂಗ ವಿಠ್ಠಲ ಎಂದು ಕರೆಯದೇ ಈ ಕವಿ ಅಭಂಗ ವಿಠ್ಠಲ ಎಂದು ಕರೆದಿರುವುದು ಗಮನೀಯ ಅಂಶ. ಇದೇ ಕವಿ ತನ್ನ ದಶಕುಮಾರ ಚರಿತ್ರೆಯಲ್ಲಿ ವಿಶ್ರುತನ ಬಾಯಿಯಿಂದ ಭೀಮನದೀ ತೀರದಲ್ಲಿರುವ ಪಂಡರಾಪುರ ಕ್ಷೇತ್ರವನ್ನು 'ಪಾಂಡುರಂಗಪುರ' ಎಂದು ಕರೆದುಕೊಂಡಿದ್ದಾನೆ. ಹೀಗಾಗಿ ಪಂಡರಾಪುರಕ್ಕೆ ಆ ಕಾಲದಲ್ಲಿ ಪಾಂಡುರಂಗಪುರ ಎಂದು ಹೆಸರಿದ್ದಿರುವ ಸಾಧ್ಯತೆಯಿದೆ.

ಅಲ್ಲೂ ಇಲ್ಲೂ ಜನಪ್ರಿಯ ಖಂಡೋಬ ! (ಮೈಲಾರಲಿಂಗ)

ಮಹಾರಾಷ್ಟ್ರದ ಹಲವಾರು ದೇವತೆಗಳು ಮೂಲದಲ್ಲಿ ಕನ್ನಡಿಗರ ದೇವತೆಗಳೆಂಬುದರಲ್ಲಿ ಎರಡು ಮಾತಿಲ್ಲ. ಪಂಡರಪುರದ ವಿಠ್ಠಲ ಕನ್ನಡಿಗರ ದೇವರೆಂಬ ವಿಷಯವನ್ನು ಮರಾಠಿ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಕೊಲ್ಹಾಪುರದ ಮಹಾಲಕ್ಷ್ಮೀಯೂ ಕನ್ನಡಿಗರ ದೇವತೆಯೇ. ಇದೇ ದೇವತಾ ಪರಂಪರೆಗೆ ಮೈಲಾರ ದೇವನೂ ಸೇರಿಕೊಳ್ಳುತ್ತಾನೆ. ಉತ್ತರ ಕರ್ನಾಟಕದ ಆರಾಧ್ಯ ದೈವ ಮೈಲಾರ ಲಿಂಗಕ್ಕೆ ಮರಾಠಿಗರು 'ಖಂಡೋಬಾ' ಎಂದು ಕರೆದು ಪೂಜಿಸಿ ತಮ್ಮವನ್ನಾಗಿ ಮಾಡಿಕೊಂಡರು. ಮಹಾರಾಷ್ಟ್ರದ ಅನೇಕ ದೇವಾಲಯಗಳಲ್ಲಿ ಇವತ್ತಿಗೂ ಖಂಡೋಬನ ಆರಾಧನೆ ವೈಭಯುತವಾಗಿ ನಡೆಯುತ್ತಿದೆ. ಮಹಾರಾಷ್ಟ್ರದ ಅನೇಕ ರಾಜಮನೆತನಗಳ ಮನೆದೇವರು ಈ ಖಂಡೋಬ ಅಥವಾ ನಮ್ಮ ಮೈಲಾರಲಿಂಗ !

ಇಂದಿಗೂ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಬಹಳ ಶ್ರದ್ಧಾಭಕ್ತಿಯಿಂದ ಜನ ಮೈಲಾರಲಿಂಗದ ಪೂಜೆಯಲ್ಲಿ ತೊಡಗಿಕೊಂಡಿದ್ದಾರೆ. ಇದಕ್ಕೆ ಈ ಬಗೆಗೆ ಸಂಶೋಧನೆ ನಡೆಸಿದ ನೇಗಿನ ಹಾಳ ಅವರು ಕೊಡುವ ಕಾರಣ ಸ್ವಾರಸ್ಯ ಪೂರ್ಣವಾಗಿದೆ. ಅದು ಇಂತಿದೆ.

ಪ್ರಾಚೀನ ಕಾಲದಂತೆ ಈಗಲೂ ಮೈಲಾರ ದೇವರ. ಸಂಪ್ರದಾಯಕ್ಕೆ ಸಂಬಂಧಿಸಿದ ದೇವಾಲಯಗಳು ಕಾವೇರಿಯಿಂದ ಗೋದಾವರಿವರೆಗಿನ ಪ್ರದೇಶದ ತುಂಬಾ ಹರಡಿವೆ. ಅಪವಾದಾತ್ಮಕವಾಗಿ ಕೆಲವು ಪ್ರಸ್ತುತ ಪ್ರದೇಶದ ಆಚೆಗೂ ಕಂಡು ಬಂದಿವೆ. ಸದ್ಯ ಮಧ್ಯಪ್ರದೇಶದ ಇಂದೂರು ನಗರದಲ್ಲಿಯೂ ಒಂದು ದೇವಾಲಯವಿದೆ. ಮಹಾರಾಷ್ಟ್ರದ ರಾಜಮನೆತನಗಳಲ್ಲಿ ಈ ದೇವರನ್ನು ಭಕ್ತಿಗೌರವಗಳಿಂದ ಪೂಜಿಸತೊಡಗಿದ. ಕಾರಣ ಮಹಾರಾಷ್ಟ್ರದ ತುಂಬ ಈ ದೇವರು ಪ್ರತಿಷ್ಠಿತನಾದ. ಈಗ ಮಹಾರಾಷ್ಟ್ರದ ಕೊಂಕಣ ಮತ್ತು ವಿದರ್ಭ ಪ್ರದೇಶಗಳಲ್ಲಿಯೂ ಈ ದೇವಾಲಯಗಳು ವಿಸ್ತರಿಸಿ ಬಿಟ್ಟಿವೆ. ಆದರೆ ಹದಿಮೂರನೆಯ ಶತಮಾನದ ಹಿಂದೆ ಕೊಂಕಣ ಮತ್ತು ವಿದರ್ಭಗಳಲ್ಲಿ ಮೈಲಾರದೇವರ ದೇವಾಲಯಗಳು ಬಹುಶಃ ಇರಲಿಲ್ಲ. ಹದಿಮೂರನೆಯ ಶತಮಾನದಕ್ಕೆಂದರೆ ಮಹಾರಾಷ್ಟ್ರದ ಇನ್ನಿತರ ಭಾಗಗಳಲ್ಲಿ ಈ ಸಂಪ್ರದಾಯ ರೂಢ ಮೂಲವಾಗಿದ್ದ ಬಗ್ಗೆ ಜ್ಞಾನೇಶ್ವರಿ ಮತ್ತು ಲೀಳಾ ಚರಿತ್ರಗಳಲ್ಲಿ ಖಚಿತ ಆಧಾರಗಳಿವೆ'' ಎಂದಿದ್ದಾರೆ (ಮೈಲಾರ -ಖಂಡೋಬಾ, 1992 ಪುಟ 3)

ಮಹಾರಾಷ್ಟ್ರದಲ್ಲಿ ಸುಮಾರು ಮುನ್ನೂರರಷ್ಟು ಖಂಡೋಬಾ ದೇವಾಲಯಗಳಿವೆ. ಅವುಗಳಲ್ಲಿ ಜೆಜೂರಿ, ನೇವಾಸೆ, ಪಾಲಿ, ಸಾತಾರ, ಮೂಲೆಗಾಂವ್ ಮೊದಲಾದ ಕಡೆ ದೊಡ್ಡ ಪ್ರಮಾಣದಲ್ಲಿ ಈ ದೇವರ ಆರಾಧನೆ ನಡೆಯುತ್ತಿದ್ದು ದಿನವಿಡಿ ಸಾವಿರಾರು

ಭಕ್ತರನ್ನು ಬರಮಾಡಿಕೊಳ್ಳುತ್ತಿವೆ.

ಜೆಜೂರಿಯ ಖಂಡೋಬಾ

ಮಹಾರಾಷ್ಟ್ರದ ಖಂಡೋಬಾ ದೇವಾಲಯಗಳಲ್ಲಿ ಜೆಜೂರಿಯ ಹೆಸರು ಎದ್ದು ಕಾಣುವಂಥದ್ದು. ಇದು ಪುನಾ ಜಿಲ್ಲೆಯ ಪುರಂದರ ಎಂಬ ತಾಲೂಕಿನಲ್ಲಿದೆ. ಎತ್ತರವಾದ ಗುಡ್ಡದ ಮೇಲಿರುವ ಜೆಜೂರಿ ಖಂಡೋಬ ದರ್ಶನಕ್ಕೆ ಭಕ್ತರು ಮುನ್ನೂರು ಮೆಟ್ಟಿಲುಗಳನ್ನು ಹತ್ತಿ ಹೋಗಬೇಕು. ಈ ದೇವಾಲಾಯವನ್ನು ಗಡ - ಕೋಟ ದೇವಾಲಯವೆಂದೂ ಕರೆಯಲಾಗುತ್ತದೆ. ಖಂಡೋಬನ ಹೆಂಡತಿ ಮಾಳಚಿ ಅಥವಾ ಗಂಗಿ ಮಾಳವ್ವ. ಮಹಾರಾಷ್ಟ್ರದ ಭಕ್ತರು ಈ ಮಾಳಚಿಯನ್ನು ಮಾಳಸಾ ಎಂದೇ ಆರಾಧಿಸುತ್ತಾರೆ. ಅವರ ಪ್ರಕಾರ ಮಾಳಸಾ ಖಂಡೋಬನ ಪತ್ನಿ, ಮೈಲಾರ ಲಿಂಗನ ಕಪ್ಪು ಶಿಲೆಯ ಮೂರ್ತಿ, ಗೋಪುರ ನಮ್ಮ ಗಮನ ಸೆಳೆಯುತ್ತದೆ. ದೇವಾಲಯದ ಕೆಳಭಾಗದಲ್ಲಿ ಹೇಗಡೆ ಮತ್ತು ಬಾಣಾಯಿಯರ ದೇವಾಲಯಗಳಿವೆ. ಮರಾಠ ಪೇಶ್ವೆಗಳ ಕಾಲದಲ್ಲಿ ಈ ದೇವಾಲಯ ಸಾಕಷ್ಟು ಉನ್ನತಿಯನ್ನು ಕಂಡಿತೆಂಬ ಅಶ ಶಾಸನಗಳಲ್ಲಿ ದಾಖಲಾಗಿದೆ. ಕರ್ನಾಟಕದ ಮೈಲಾರಲಿಂಗದ ಆರಾಧನಾ ಕ್ರಮವೆ ಇಲ್ಲಿಯೂ ಹೆಚ್ಚೂ ಕಡಿಮೆ ಚಾಲ್ತಿಯಲ್ಲಿದೆ.

ನೇವಾಸೆ : ನೇವಾಸೆ ಅಹಮ್ಮದ್ ನಗರ ಜಿಲ್ಲೆಯಿಂದ ಮೂವತ್ತೈದು ಕಿ.ಮೀ. ದೂರದಲ್ಲಿದೆ. ನೇವಾಸೆಯ ಖಂಡೋಬಾ ದೇವಾಲಯಕ್ಕೆ ಸಾಕಷ್ಟು ಪ್ರಾಚೀನ ಹಿನ್ನೆಲೆಯಿದೆ. ಜ್ಞಾನೇಶ್ವರ ಇಲ್ಲಿಯೇ ಜ್ಞಾನೇಶ್ವರಿ ಕೃತಿಯನ್ನು ಪೂರ್ಣಗೊಳಿಸಿದ ವಿವರ ಶಾಸನಗಳಲ್ಲಿ ದಾಖಲಾಗಿದೆ. ಹೀಗಾಗಿ ಇಲ್ಲಿ ಜ್ಞಾನೇಶ್ವರನ ಮಂದಿರವೂ ಇದೆ. ಖಂಡೋಬನ ಹೆಂಡತಿ ಮಾಳಸಾ ಅಥವಾ ಮಾಳಚಿ. ನೇವಾಸೆಯಲ್ಲಿ ಖಂಡೋಬ ದೇವರಿಗಿಂತ ಮಾಳ್ಸಾ ನಾರಾಯಣಿಗೆ ಬಹಳ ಮನ್ನಣೆ. ಮಾಳಸಾ ದೇವಿಯ ಗುಡಿಯೂ ಇಲ್ಲಿದೆ.

ಜ್ಞಾನದೇವ ತನ್ನ ಕೃತಿಯಲ್ಲಿ ಮಾಳ್ಸಾ ದೇವಿಯನ್ನು

'ತ್ರಿಭುವನೈಕ ಪವಿತ್ರ
ಅನಾದಿ ಪಂಚಕೋಶ ಕ್ಷೇತ್ರ
ಜೇಥೆ ಜಗಾಚೇ ಜೀವನ ಸೂತ್ರ
ಶ್ರೀ ಮಹಾಲಸಾ ಆಸೇ'

ಎಂದು ಕೊಂಡಿದ್ದಾನೆ. ಮಹಾನುಭಾವ ಪಂಥದ ಸ್ಥಾಪಕ ಚಕ್ರಧರ (ಕ್ರಿ.ಶ. 1194-1274). ಆತ ಕೆಲಕಾಲ ನೇವಾಸೆಯಲ್ಲಿ ತಂಗಿದ್ದನೆಂಬ ಪ್ರತೀತಿಯಿದೆ. ತನ್ನ ಕೃತಿ ಲೀಳಾ ಚರಿತ್ರದಲ್ಲಿಯೂ ಆತ ಮಾಲಸಾ ದೇವಿಯನ್ನು ಸ್ತುತಿಸಿದ್ದಾನೆ. ಖಂಡೋಬ-ಮಾಹಾಲಸಾರ ಕುರಿತು ಅನೇಕ ಐತಿಹ್ಯಗಳು ಇಂದಿಗೂ ಚಾಲ್ತಿಯಲಿವೆ. ಗೋದಾವರಿ ಮತ್ತು ಪ್ರವರಾ ನದಿಗಳ ಸಂಗಮ ಸ್ಥಾನದಲ್ಲಿರುವ ನೇವಾಸೆ ಪ್ರಸಿದ್ಧ ತೀರ್ಥ ಕ್ಷೇತ್ರವಾಗಿ ಹೆಸರುವಾಸಿಯಾಗಿದೆ.

ಪಾಲಿಪೇಂಬರ (ರಾಜಾಪುರ) :

ಇದು ಸತಾರಾ ಜಿಲ್ಲೆಯಿಂದ ಮೂವತ್ತೈದು ಕಿ.ಮೀ. ದೂರದಲ್ಲಿದೆ. ಇಲ್ಲಿಯೂ ಪ್ರಾಚೀನವಾದ ಖಂಡೋಬಾ ದೇವಾಲಯವಿದೆ. ಪಾಲಿ ಎಂದು ಕರೆಯುವ ಈ ಸ್ಥಳವನ್ನು ರಾಜಾಪುರ ಎಂದೂ ಹೆಸರಿಸಲಾಗುತ್ತಿದೆ. ನದಿ ದಡದಲ್ಲಿ ಭವ್ಯವಾದ ಖಂಡೋಬಾ ದೇವಾಲಯ ತಲೆಯೆತ್ತಿನಿಂತಿದೆ. ಮರಾಠ ದೊರೆಗಳು ಈ ದೇವಾಲಯಕ್ಕೆ ದತ್ತಿ ಬಿಟ್ಟ ಅಂಶ ದಾಖಲಾಗಿದೆ. ಬೀದರ್ ಜಿಲ್ಲೆಯ ಪ್ರೇಮಪುರದಿಂದ ಖಂಡೋಬಾ ಇಲ್ಲಿಗೆ ಬಂದು ನೆಲೆಸಿದ್ದರಿಂದ ಇಲ್ಲಿನ ಖಂಡೋಬಾನನ್ನು ಪಾಲಿಪೆಂಬರದ ಖಂಡೋಬಾ ಎಂದೇ ಕರೆಯಲಾಗುತ್ತದೆ.

ಕರ್ನಾಟಕದಲ್ಲಿರುವ ಮೈಲಾರಲಿಂಗನನ ಸಂಪ್ರದಾಯ ಮಹಾರಾಷ್ಟ್ರದಲ್ಲೂ ತುಸು ರೂಪ ಬದಲಿಸಿಕೊಂಡು, ಕೆಲವೆಡೆ ಯಥಾವತ್ತಾಗಿ ಜಾರಿಯಲ್ಲಿರುವುದನ್ನು ಕಾಣಬಹುದು. ಮಹಾರಾಷ್ಟ್ರದ ಖಂಡೋಬ ಸಂಪ್ರದಾಯಕ್ಕೂ ಕರ್ನಾಟಕದ ಎಲ್ಲಮ್ಮ ಸಂಪ್ರದಾಯಕ್ಕೂ ಸಾಕಷ್ಟು ಹೋಲಿಕೆಯಿದೆ. ಕರ್ನಾಟಕದ ಮೈಲಾರಂಲಿಂಗನಂತೆ ಮಹಾರಾಷ್ಟ್ರದ ಖಂಡೋಬ ಭಂಡಾರ ಪ್ರಿಯ. ಎಕ್ಕೋಟಿ ಏಳು ಕೋಟಿ ಎಕ್ಕೋಟಿ ಎಂದಾಗಿದೆ. ಇದರ ಹಿನ್ನೆಲೆಯಲ್ಲಿ ಜಾನಪದ ಕಥೆಯೊಂದಿದೆ. ಅದರ ಪ್ರಕಾರ ಕಾಸಿನ ದೇವರೆಂದು ಪ್ರಸಿದ್ಧನಾದ ತಿರುಪತಿಯ ತಿಮ್ಮಪ್ಪನ ಮಗಳು ಅಥವಾ ತಂಗಿಯಾದ ಗಂಗವ್ವನ ಮೈಲಾರ ಲಿಂಗ ಲಗ್ನ ಮಾಡಿಕೊಳ್ಳುವ ಮೊದಲು ಏಳು ಕೋಟಿ ಹೊನ್ನು ತೆರವು 'ಕನ್ಯಾ ದಕ್ಷಿಣೆ) ಕೊಡುವುದಾಗಿ ಹೇಳಿದ್ದ. ಆದರೆ ಕೊಡಲಿಲ್ಲ. ಏನೋನೋ ಉಪಾಯ ಹೂಡಿ ಅವರಿಗೆ ಕೈಕೊಟ್ಟ. ಇದರಿಂದ ದುಃಖಿತನಾದ ತಿಮ್ಮಪ್ಪ ''ನನ್ನ ಏಳು ಕೋಟಿ ದುಡ್ಡು ಮುಳುಗಿದೆ ನೀನು ಏಳು ಕೋಟಿ ಏಳು - ಕೋಟಿ' ಎಂದು ಬಡಬಡಿಸುತ್ತಾ 'ಭಿಕ್ಷೆ ಬೇಡುತ್ತಾ ತಿರುಗು' ಎಂದು ಇವನಿಗೆ ಶಾಪವಿತ್ತ. ಅದರ ಫಲವಾಗಿ ಈತ (ಇವನ ಗೊರವರು) ಭಿಕ್ಷೆ ಬೇಡುವಾಗ ಏಳು ಕೋಟಿ ಎಂದು ಹೇಳುತ್ತಾರೆ. (ನೋಡಿ. ನೇಗಿನ ಹಾಳೆ - ಮೈಲಾರಲಿಂಗ) ಖಂಗೋಬಾ ಪುಟ 294)

•

# Congratulations !

- Our congratulations to Smt. Tara, who bagged the Best Actress Award at the National Awards for Films recently. Many of our members will recall the visit of Smt. Tara to the Association, when we had arranged the screening of her other award winning film "Kanooru Heggadathi Subbamma".
- The film that got Smt. Tara the award was " Haseena" directed by Shri. Girish Kasaravalli, which also got an award. Our congratulations to Shri. Girish Kasaravalli. Members will recall meeting Girish at the Retrospective of his films we had arranged in association with Prabhat Chitra Mandal in July 1999.

In the recently announced list of Karnatak Rajyotsava Award recipients, we are happy to see the names of many who are who are very well known and close to us.

- Shri. Vyasa Rao Ballal - for Literature
- Shri. Madhava Gudi - Music
- Dr. Visweshwaran - Music
- Smt. Sukanya Prabhakar - Music
- T.N.Seetharam - Films
- Smt. Vaishali Kasaravalli - Films
- Shri.S.V.Rajendra Singh Babu - Films
- Shri. Chiranjeevi Singh - Administration

All these personalities have participated in the programmes of the Association.

Nesaru congratulates all of them on their achievement and wishes them greater success in the days ahead.



Sabannavar being felicitated on his 75th Birthday by fellow Artists

# OBITUARY

We regret to inform our readers that, the well-known artist - Shri. Nagesh Bhimarao Sabannavar - passed away recently. He was 80 years.

Sabannavar hailed from a family of artists. His father, uncles from both father and mother's side, as well as many other elders in the family were traditional artists and sculptors. It is said that this family of artists had played a significant role in the sculpting the gold throne of the Mysore Royal family. Perhaps this was the reason for Sabannavar's preference towards metal sculptures, though he was equally good at painting and other art forms. The credit for studying scientifically the art that was traditionally followed by their family for generations goes to Sabannawar.

In his teens, Sabannavar was drawn into the freedom struggle that was going on and he came to Mumbai (Bombay then) to dodge the police who were after him. Life in Bombay was no bed of roses. But despite a few years of such struggle, the spirit of Sabannavar was not daunted. He joined the J.J.School of Arts and completed his diploma with honours. Sabannavar subsequently taught at the J.J.School of Art for the next 35 years. In these years he had a large number of students, many of whom have today become well known artists.

Sabannavar had many firsts to his credit. He has designed many coins, when the task of designing such pieces were being given to foreigners. He has designed many mementos, medallions and plaques. Ganesha was a favourite subject of his and we can see many statuettes of Ganesha designed by him.

Sabannavar was a member of The Mysore Association and was always a source of great support to the organization in holding exhibitions of art, etc. Recently, when we held a demonstration workshop on making a fibre mural, Sabannavar was the Chief Guest at the concluding ceremony of the workshop.

In the passing away of Sabannavar we have lost a great artist and a good person. He leaves behind his wife and children. The tradition of art continues in the family, with his son and daughter being in the field of art.

Nesaru prays that Sabannavar's family be endowed with the strength to bear this loss with fortitude.

## ಲಕ್ಷ್ಮೀರಮಣ-ಉರುಫ್-ಸರಸ್ವತಿರಮಣ -- ನಾ ಕಂಡಂತೆ

- ಸಿ.ಕೆ. ಶಂಕರನಾರಾಯಣ ರಾವ್

ನಾನು ನನ್ನ ಪೂಜ್ಯ ಗುರುಗಳು ಡಾ. ಶ್ರೀ ವೀಣೆ ಚಂದ್ರಶೇಖರಯ್ಯನವರೊಂದಿಗೆ 1950 ಇಸವಿಯ ಜನವರಿಯಲ್ಲಿ ಮುಂಬಯಿಗೆ ಬಂದು ಅವರೊಂದಿಗೆ ಮೈಸೂರು ಅಸೋಸಿಯೇಷನ್ ಸೇರಿದಂತೆ ಮುಂಬಯಿ ಅಹಮದಾಬಾದ್, ಅಜ್ಮೀರ್, ನವದೆಹಲಿಗಳಲ್ಲಿ ಅನೇಕ ದ್ವಂದ್ವವೀಣಾ ಕಾರ್ಯಕ್ರಮಗಳನ್ನು ಕೊಟ್ಟು ಪುನಃ ಮುಂಬಯಿಗೆ ಹಿಂತಿರುಗಿದ ನಂತರ ಗುರುಗಳ ಆಣತಿಯಂತೆ ಅದೇ ಏಪ್ರಿಲ್ ತಿಂಗಳ 25ನೆಯ ತಾರೀಖಿನಿಂದ ಮುಂಬಯಿಯಲ್ಲಿ ನೆಲೆಸಿ ವೀಣೆ ಮೇಷ್ಟ್ರಾಗಿ ಇಲ್ಲಿನ ನಿವಾಸಿಯಾದೆ, ನಂತರ, ಮೈಸೂರು ಅಸೋಸಿಯೇಷನ್, ಮುಂಬಯಿ ಕನ್ನಡ ಸಂಘ, ರಾಷ್ಟ್ರೀಯ ಕನ್ನಡ ಶಾಲೆ, ಕರ್ನಾಟಕ ಸಂಘಗಳಿಗೆ ಸದಸ್ಯನಾಗಿ ನೊಂದಿಸಿಕೊಂಡೆ.

ಆಗ ಅಸೋಸಿಯೇಷನ್ನಿನಲ್ಲಿ ನನ್ನ ಬಾಲ್ಯ ಸಹಪಾಠಿ ಟಿ. ಆರ್. ಎಸ್. ಆನಂದಂ, ಹಾಗೂ ಬೆಂಗಳೂರಿನಲ್ಲೇ ಪರಿಚಯವಾಗಿದ್ದ ಚಲನ ಚಿತ್ರಗ್ರಾಹಕ ಶ್ರೀ ವಿ.ಕೆ. ಮೂರ್ತಿಯವರ ಸಹಯೋಗ ಪ್ರಾಪ್ತವಾಯಿತು. ಅವರುಗಳ ಇರಾದೆಯಂತೆ ಅಸೋಸಿಯೇಷನ್ನಿನ ನಾಟಕ ತಂಡದ ಸದಸ್ಯನಾದೆ. ಆತ ಸಂದರ್ಭದಲ್ಲಿ ದಿ. ಸಿ.ಎಸ್. ಪುಟ್ಟಣ್ಣಯ್ಯ ಹಾಗೂ ದಿ. ಲಕ್ಷ್ಮೀರಮಣರವರುಗಳ ನಿಕಟ ಸಂಪರ್ಕ ವಾಯಿತು. ಲಕ್ಷ್ಮೀರಮಣ ಅಸೋಸಿಯೇಷನ್ನಿನ ನಾಟಕ ತಂಡದಲ್ಲಿ ಸ್ತ್ರೀ ಪಾತ್ರಧಾರಿಗಳಲ್ಲಿ ಪ್ರಮುಖರಾಗಿದ್ದರು.

ಆ ಸಂದರ್ಭದಲ್ಲಿ ಈ ಸ್ನೇಹಿತರುಗಳ ಅಪೇಕ್ಷೆಯಂತೆ 'ಸೌಭಾಗ' ಎಂಬ ನಾಟಕವನ್ನು ನಾನೇ ದಿಗ್ದರ್ಶಿಸಿ, ಪ್ರಮುಖ ಪಾತ್ರವನ್ನು ವಹಿಸಿ ಅಸೋಸಿಯೇಷನ್ನಿನಲ್ಲಿ 1950ನೇ ಆಗಸ್ಟ್ 15ನೆ ತಾರೀಖು ಆಡಿಸಿದೆ. ಅದರಲ್ಲಿ ನಾನು ಸುಬ್ಬ ನರಸಿಂಹಯ್ಯನಾಗಿಯೂ, ಲಕ್ಷ್ಮೀರಮಣ ಆತನ ಪತ್ನಿ ಸುಬ್ಬಲಕ್ಷ್ಮೀಯಾಗಿಯೂ, ಪುಟ್ಟಣ್ಣಯ್ಯ ಬಾಡಿಗೆ ಕೊಟ್ಟ ಮನೆಯ ಮಾಲಿಕ ಸಂಗ್ರಾಮಯ್ಯನಾಗಿಯೂ ಹಾಗೂ ಅಸೋಸಿಯೇಷನ್ನಿನ ಪಕ್ಕದ ಮನೆಯವಾಸಿ ರಾಮು ಆ ದಂಪತಿಗಳ ಮಗ ಸುಬ್ಬುಕೃಷ್ಣನಾಗಿಯೂ ಪಾತ್ರಧಾರಿಗಳಾಗಿ ಮೆಚ್ಚುಗೆಗೆ ಪಾತ್ರರಾದೆವು.

ನನ್ನ ಈ ಮೊದಲ ನಾಟಕದ ಪಾತ್ರ ಜನಗಳ ಮೆಚ್ಚುಗೆಗೆ ಪಾತ್ರವಾದುದಲ್ಲದೆ ನಾನು ಇಲ್ಲಿನ ಆಸಕ್ತರಿಗೆ ವೀಣೆ ಪಾಠ ಹೇಳಲು ಬಂದ ವೀಣೆ ಮೇಷ್ಟ್ರೆಂದು ಪ್ರಚಾರವೂ ಆಗಿ ಇಲ್ಲೇ ಶಾಶ್ವತವಾಗಿ ನೆಲೆಸಲು ಬುನಾದಿಯಾಯಿತು. ಹಾಗೂ ಲಕ್ಷ್ಮೀರಮಣ, ಪುಟ್ಟಣ್ಣಯ್ಯ, ವಿ.ಕೆ. ಮೂರ್ತಿ (ಕುಟ್ಟಿ) ಇವರುಗಳ ಒಡನಾಟದಲ್ಲಿ ಅಸೋಸಿಯೇಷನ್ನಿನಲ್ಲಿ ಕೈಲಾಸಂ ನಾಟಕಗಳು, ಡಾ. ಪುಟ್ಟಣ್ಣಯ್ಯನವರ ಭಂಡಬಾಳು ಮೊದಲಾದ ನಾಟಕಗಳು ಹಾಗೂ ಇತರ ಕನ್ನಡ ನಾಟಕ ಕರ್ತರ ನಾಟಕಗಳು ಇವುಗಳಲ್ಲಿ ಪಾತ್ರವಹಿಸುವುದು ಅವ್ಯಾಹತವಾಗಿ ಸಾಗಿತು.



ಲಕ್ಷ್ಮೀರಮಣ

ಪ್ರಾರಂಭದಲ್ಲಿ ನಾನು ರಾಷ್ಟ್ರೀಯ ಕನ್ನಡ ಶಾಲೆಯ Principal Quartersಗಾಗಿ ಕಾದಿಟ್ಟಿದ್ದ ಒಂದು Flatನಲ್ಲಿ (B.S.T. Building) ನೆಲೆಸಿದ್ದೆ ಆಗ ಅಲ್ಲಿಗೆ ನನ್ನ ಇನ್ನೊಬ್ಬ ಬೆಂಗಳೂರಿನ ನಾಟಕದ ಮಿತ್ರ ಹಾಗೂ ಪೂಜ್ಯ ದೇವುಡು ನರಸಿಂಹ ಶಾಸ್ತ್ರಿಗಳ ಮಗ ಡಿ.ಎನ್. ರಾಮು ಬಂದು ನನ್ನ ಜೊತೆಗೆ ಒಂದು ದಿನ ಕಳೆದ. ಆಗ ಗೊತ್ತಾಯಿತು. ರಾಮುವಿನ ಧರ್ಮಪತ್ನಿ ಲಕ್ಷ್ಮೀರಮಣ ತಂಗಿಯೆಂದು. ನಮ್ಮ ಇಬ್ಬರ ಸಂಬಂಧವೂ ಇನ್ನೂ ನಿಕಟವಾಯಿತು.

ನಂತರ ಒಂದೆರಡು ವರ್ಷಗಳಲ್ಲಿ ಲಕ್ಷ್ಮೀರಮಣನ ಮದುವೆ ಹಾಸನದ ವಧುವಿನೊಂದಿಗೆ ಹಾಸನದಲ್ಲಿ ನೆರವೇರುವುದೆಂದು ಗೊತ್ತಾಯಿತು. ಕೈಗೆ ಲಗ್ನಪತ್ರಿಕೆಯೂ ಬಂದಿತು. ವಧುವಿನ ಹೆಸರು ಸರಸ್ವತಿ ಎದು ಇದ್ದುದನ್ನು ನೋಡಿ ಲಕ್ಷ್ಮೀರಮಣ ಹಾಸನಕ್ಕೆ ಹೋಗಿ ಸರಸ್ವತಿರಮಣನಾಗಿ ಬರುತ್ತಾನೆ ಎಂಬ ಯೋಚನೆ ಬಂದು ಪೂರ್ವಾಪರ ಯೋಚನೆ ಮಾಡದೆ ಕೀಟಲೆಗಾಗಿ ಗ್ರೀಟಿಂಗ್ ಕಳುಹಿಸಬೇಕಾದರೆ ಸರಸ್ವತೀ ರಮಣನಿಗೆ ಎಂದು ಕಳುಹಿಸಿ ಬಿಟ್ಟೆ.

ಆದರೆ ಆ ಗ್ರೀಟಿಂಗ್ ಲಕ್ಷ್ಮೀರಮಣನಿಗೆ ತಲುಪುವ ಬದಲು ವಧುವಿಗೆ ತಲುಪಿ ಪಾಪ ವಧುವಿಗೆ ಇದ್ದಾರಪ್ಪ

(ಪುಟ 9ಕ್ಕೆ)

# ಸಂಕಲ್ಪ ಮತ್ತು ನಿರ್ಧಾರ

- ವಾಸುದೇವ ಕಾಣೆಮಾರ್

ಸಂಕಲ್ಪವೆಂದರೆ ವಿಚಾರಗಳ ಹರಿವಿನಲ್ಲಿ ಕೊಚ್ಚಿಹೋಗದಿರುವಂತೆ ಸ್ಥಿರಚಿತ್ತದಲ್ಲಿದ್ದು ಯುಕ್ತಿಯುತವಾಗಿ ತೆಗೆದುಕೊಂಡ ನಿರ್ಣಯ. ಅದಕ್ಕೆ ಉದ್ದೇಶದ ಗುರಿ ಮತ್ತು ಚಿಂತನೆಯ ಮಾರ್ಗ ಇರುತ್ತವೆ. ಸಾಮಾನ್ಯವಾಗಿ ಅದು ಒಂದು ಆಶಯ ಅಥವಾ ಬಯಕೆಯನ್ನು ಏಕಚಿತ್ತದಿಂದ ನೆನೆಯುವುದಾಗಿದೆ ಮತ್ತು ಹಾಗೆ ವಿಚಾರಿಸಿದ್ದನ್ನು ಮಾತ್ರ ಕಾರ್ಯರೂಪದಲ್ಲಿ ತರಲು ತೊಡಗುವುದಾಗಿದೆ.

ಸಂಕಲ್ಪವು ಬಹುಘಾನವಾದರೆ ಪ್ರತಿಜ್ಞಾರೂಪವನ್ನು ತಾಳಬಹುದು. ಆಗ ಅದಕ್ಕೆ ದೃಢ ನಿರ್ಧಾರವೆನ್ನುವರು. ಹಾಗಾದಾಗ ಅದು ಮತ್ತೆ ಸಂಶಯಕ್ಕೆ, ಗಲಿಬಿಲಿಗೆ ಇಲ್ಲವೆ ಚಿತ್ತಕ್ಷೋಭೆಗೇಲ್ಲ ವಿರುದ್ಧವಾಗಿ ನಿಲ್ಲುತ್ತದೆ. ನಡಗೋಡೆ ಹಿಡಿಯುವ ಪಕ್ಷವನ್ನೆಂದೂ ಅದು ಹಿಡಿಯುವುದಿಲ್ಲ. ಜ್ಞಾಪಕ ಹೀನತೆಯನ್ನು ತೊಡೆದು ಸತತ ವಿಸ್ಮರಣೆಯುಳ್ಳದ್ದಾಗಿ ಸಂಕಲ್ಪವು ಜಾಗ್ರತವಾಗಿರಬೇಕು. ನಮ್ಮ ಸಂಕಲ್ಪಗಳನ್ನು ಬಲಗೊಳಿಸಲಿಕ್ಕೂ ನಮ್ಮ ಮೇಲೆ ಆಗಾಗ ನಮ್ಮ ಯೋಚನೆಗಳಿಂದಲೇ ಆಗುವ ಕೆಲವು ಅಹಿತಕರ ಪ್ರಭಾವಗಳನ್ನೂ ತಡೆಯಲಿಕ್ಕೂ ನಾವು ಹೊಸ ನಿರ್ಧಾರಗಳನ್ನು ಆಗಾಗ ಮಾಡಿಕೊಳ್ಳಬೇಕಾಗುವುದು. ಇದು ನಮಗೆ ಸಾಧನಾಯೋಗದ ಮೆಟ್ಟಿಲುಗಳನ್ನು ಏರಲು ಸಹಜವಾಗಿ ಸಹಾಯ ಮಾಡುವುದು. ಸಾಧನೆಯು ಚೆನ್ನಾಗಿ ಪ್ರಾರಂಭಗೊಳ್ಳುವಂತೆ ಮಾಡಿದಾಗ ಸಿದ್ಧಿಯು ಅರ್ಧದಷ್ಟಾದರೂ ಲಭಿಸಿದಂತೆಯೇ.

ನಾನು ಆಲೋಚನೆ ಮಾಡುತ್ತಿದ್ದೇನೆ ಎಂದರೆ ನಾನು ಚೇತನ ಪ್ರಜ್ಞಾಪೂರ್ವಕ ಮಾಡುವ ವಿಚಾರ ವಿಷಯಗಳಿವೆ. ಅದನ್ನು ಮೆಲುಕು ಹಾಕುತ್ತೇನೆ. ಇಲ್ಲವೆ ಸುಮ್ಮಗೆ ಹರಿಸಿಕೊಂಡು ಹೋಗುತ್ತೇನೆ ಎನ್ನುವುದೇಅರ್ಥ. ಸ್ವಲ್ಪ ದೂರ ಮಾತ್ರ ಈ ಆಲೋಚನಾ ವಿಧಾನವು ಸಾಗಬಲ್ಲುದು. ಮತ್ತೆ ನಮ್ಮ ಸ್ವಾಭಾವಿಕ ಮುಕ್ತ ಬಲದೊಳಗೆ ತನ್ನಿಂದ ತಾನೆ ಬಂದ ಒಂದು ಯೋಚನೆಯು ಮಾತ್ರ ಉಳಿವಂತೆ, ಉನ್ನತ ಸ್ಥಿತಿಯಲ್ಲಿರುವಂತೆ, ಗ್ರಹಿಕೆಯಾಗುವುದು. ಸ್ಥಿರವಾಗ ಯೋಚನೆಯೊಂದು ಕಾಣಿಸಿಕೊಂಡಂತೆ ಆಗುವುದು. ಸೊಳ್ಳೆಯೊಂದು ನಮ್ಮ ಮೈಚರ್ಮವನ್ನು ಕಡಿದಾಗ ನಮ್ಮ ಕೈಗಳು ನಮಗೆ ಹೆಚ್ಚಿನ ಅರಿವಿಲ್ಲದೆ ಸ್ವಭಾವತಃ ಆ ಸೊಳ್ಳೆಯನ್ನು ನಿವಾರಿಸಲು ಅಟ್ಟಿ ಬಿಡುತ್ತೇವೆ. ಹಾಗೆ ಸ್ಥಿರವಾದ ಯೋಚನೆಯೊಂದು ಒಂದು ಕಾರ್ಯಗತವಾಗುವುದು. ಈ ವಿಚಾರವೇ ಸಂಕಲ್ಪಕ್ಕೆ ಇರುವ ಆಧಾರ.

ಹೊಸ ವಿಷಯವು ಮನಸ್ಸಿನ ಮೇಲೆ ಬಂದಾಗ ಅದಕ್ಕೆ ಹೊಸ ರಸ್ತೆಯನ್ನು ಮನಸ್ಸು ಮಾಡಿಕೊಡಬೇಕಲ್ಲವೇ? ಸ್ವಭಾವಗುಣ (INSTINCT)ಕ್ಕೆ ಬಲಿಯಾದ ಕೆಳಸ್ತರದ ಮನಸ್ಸು ಹೊಸ ಭಾವನೆಗಳ ಪ್ರಭಾವಕ್ಕೆ ಬೀಳಲು ಸುಲಭವಾಗಿ ಒಪ್ಪುದಿಲ್ಲ. ಆಗ ಮನುಷ್ಯನು ಹೆಚ್ಚು ಆಲೋಚನಾ ಪರನಾದಷ್ಟೂ ಮಿದುಳು ಹೊಸ ಭಾವನೆಗಳೊಡನೆ ಹೋರಾಡುತ್ತದಲ್ಲದೆ ಅವುಗಳ ಭಾರಕ್ಕೆ ಜಗ್ಗುವುದಿಲ್ಲ. ಹಾಗಾಗಿ ಮನುಷ್ಯನು ಸುಲಭವಾಗಿ ಹೊಸ ಭಾವನೆಗಳನ್ನು (IDEAS)ಸ್ವೀಕರಿಸಿ ಅರ್ಥ ಮಾಡಿಕೊಳ್ಳುವುದಿಲ್ಲ. ಸ್ಮೃತಿಗೆ ಧೃತಿಕೊಡುವ ಧಾರಣಾ ವೇಘದಲ್ಲಿ ಕ್ರಿಯೋತ್ತೇಜಕ ಶಕ್ತಿಯು ಪ್ರಾಣದಿಂದ ಬರುವುದು. ಮತ್ತು ಆಗ ಮನಸ್ಸಿಗಾಗು ಅಸ್ವಸ್ಥತೆಯು ಕಡಿಮೆಯಾಗುವುದು. ಇದಕ್ಕೆ ಹೇಳುತ್ತಾರೆ ಏನೆಂದರೆ ಮುಕ್ತ ನಿರ್ಧಾರವು ಅಗತ್ಯವೆಂದು.

ಜ್ಞಾನೋದ್ದೀಪಿತ ಚಿತ್ತರಾದ ಕೆಲವರಿಗೆ ಸಂದೇಹವಾದವು ಹಾನಿಯನ್ನು ಉಂಟು ಮಾಡುವುದರ ಬದಲು ಕೆಲವೊಮ್ಮೆ ಒಳಿತನ್ನು ಮಾಡುವುದು ಇಲ್ಲದಿಲ್ಲ. ಅದರಲ್ಲೇ ಅವರಿಗೆ ಏನೋ ಸಮಜಾಯಿಷಿಯ ಸಮಾಧಾನವು ದೊರೆತಂತೆ ಕಾಣಬಹುದು. ಆದರೆ ಸಾಮಾನ್ಯ ಬುದ್ಧಿಯ ಜನರಿಗೆ ಸಂದೇಹವು ಸ್ಪಷ್ಟ ನಿರಾಕರಣದತ್ತ ಬಳಿಕವಾದರೂ ಒಯ್ಯುವುದು. ಇದರ ಪರಿಣಾಮವಾಗಿ ಅವರಿಗೆ ಅನಿರ್ಧಾರಿತ ಕ್ರಿಯೆ ಹಾಗೂ ಅದರ ನೈತಿಕ ಹೊಣೆಗಾರಿಕೆಗಳ ಕೆಟ್ಟ ಅನುಭವವಾಗುವುದು. ವಿವೇಚನೆಯುಳ್ಳ ಜ್ಞಾನಿಗಳು ಶಾಸ್ತ್ರಜ್ಞಾನದಲ್ಲಿ ಶ್ರದ್ಧೆಯಿರಿಸಿಕೊಂಡಾಗ ತಾವು ಕೈಗೊಂಡ ಕಾರ್ಯದ ಜ್ಞಾನವು ತಮಗೆ ಒಳ್ಳಿತಾಗಿದೆಯೆ, ಇಲ್ಲವೆ ಎಂಬ ಸಂದೇಹವು ತಪ್ಪುವುದು. ಅವರ ಸಂಕಲ್ಪ ದೃಢವಾಗುವುದು. ಸಂದೇಹವು ಅಳಿಯುತ್ತ ಹೋಗುವುದು.

ಸಂಶಯದಲ್ಲಿ ಓಲಾಡುವಾಗ ಏನಾದರೊಂದು ಇತ್ಯರ್ಥದಲ್ಲಿ ಅದು ಕೊನೆಗಾಣುವುದು ನಿಶ್ಚಿತ ನಿರ್ಣಯವೊಂದರಲ್ಲಿ. ಅದು ಅಭಿಪ್ರಾಯಗಳ ಪರಿಣಾಮಕಾರಿ ಅಭಿವ್ಯಕ್ತಿಗೆ ಸಹಾಯವಾಗುತ್ತದೆ. ಒಂದು ಬೌದ್ಧಿಕ ಕಲಹದ ವಿರುದ್ಧ ವಿತರ್ಕಗಳನ್ನು ಕೊನೆಗೊಳಿಸುತ್ತದೆ. ಇದು ಅಜ್ಞಾನಿಗಳು ಸ್ವಚ್ಛೆಂದದಲ್ಲಿ ಹಿಡಿದ ಹಟ (ಮೊಂಡುತನ)ವನ್ನು ಸೂಚಿಸುವುದಿಲ್ಲ.

ನಿರ್ಣಯಕ್ಕೆ ಬರುವುದೆಂದರೆ ವಿವಿಧ ಬಗೆಯ ವಿಚಾರಗಳು ತರ್ಕ ಗಳಿರುವುದನ್ನು ವ್ಯವಸ್ಥೆಗೆ ಮತ್ತು ತಹಬಂದಿಗೆ ತರುವುದಾಗಿದೆ. ಇದನ್ನು ಸಾಮೂಹಿಕವಾಗಿ ಒಂದು ಸಮಿತಿಯಲ್ಲಿ ಅಥವಾ ಕೂಟದಲ್ಲಿ ಸಮಾನಾಸಕ್ತ ಸದಸ್ಯರೊಡನೆ ಸೇರಿ ಮಾಡಬಹುದು. ಇಲ್ಲವೆ ವ್ಯಕ್ತಿಯೊಬ್ಬನು ತನ್ನನ್ನು ಎರಡು ಪಕ್ಷಗಳಲ್ಲಿದ್ದೇನೆ ಎಂದು ಕೊಂಡು ಕಲ್ಪಿಸಿ ತನ್ನ ಪೂರ್ವ ಪಕ್ಷ ಮತ್ತು ಪ್ರತಿಪಕ್ಷಗಳು ಹೇಗೆ ವಾದ ಮಾಡುತ್ತವೆ ಎಂಬೆರಡನ್ನೂ ತಿಳಿದ ತನ್ನ ಚಿತ್ತಕ್ಕೆ ಈ ಬಗೆಯೇ ಸರಿಯೆಂದು ತಿಳಿದು ಚಿತ್ತವನ್ನು ಮತ್ತೆ ಕಲಕದಂತೆ ಬಿಟ್ಟು ಬಿಡುವುದು ನಿರ್ಣಯವಾಗುತ್ತದೆ.(Resolution) ಅದು ಅವನ ಚಿತ್ತಕ್ಷೋಭೆಗೆ ಪರಿಹಾರವೂ ಹೌದು.

ಯುಕ್ತ ನಿರ್ಧಾರವು ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ ಸಾಧನಾ ಮಾರ್ಗಕ್ಕೆ ಪ್ರಲೋಭನೆಯಾಗಿ ಅಡ್ಡಿ ತರುವುದಿಲ್ಲ. ಆದರೂ ಅವನ ನಿರ್ಧಾರಗಳನ್ನು ವಿರೋಧಿಸುವವರು ಅವನ ಸುತ್ತಲೂ ತೋರಿ ಬರುವುದುಂಟು. ಆಗ ಅವನು ತನ್ನ ನಿರ್ಧಾರದ ಸದುಪಯೋಗತೆಯನ್ನು ಅವರಿಗೆ ಮನದಟ್ಟಾಗಿಸಲು ಅದನ್ನು ಮರೆಸಬೇಕಾಗುವುದು. ಒಂದು ವೇಳೆ ಅದಕ್ಕೆ ವಿರೋಧವೇ ಪ್ರಬಲವಾಗಿ ತನ್ನ ನಿರ್ಣಯವು ಸೋತಂತೆ ಕಂಡರೆ ಆಗಲೂ ನಿರ್ಣಯದಲ್ಲಿ ತಪ್ಪೇನಿದೆ ಎಂದು ಪುನರ್ವಿಮರ್ಶಿಸಬಹುದು. ಹಾಗೆ ಶೋಧಿಸಿದಾಗ ಆ ನಿರ್ಣಯವು ಒಂದೋ ತಿದ್ದಿಕೊಂಡು ಬರುವುದು, ಇಲ್ಲವೆ ತಿದ್ದಿಕೊಳ್ಳಲು ಸಾಧ್ಯವಿಲ್ಲವೆಂದೂ ಕಂಡರೂ ಸರಿಯೇ ಶೋಧವು ಹೆಚ್ಚಿನ ಮನೋಬಲ ಒದಗಿಸುವುದು.

ಯೋಗ್ಯ ನಿರ್ಧಾರವು ಕೆಲವು ವೇಳೆ ವಿರುದ್ಧವಾದ ಅಸುರೀ ಶಕ್ತಿಗಳ ಪ್ರಭಾವದಿಂದ ಹಿಂಜರಿಯಲೂ ಬಹುದು. ಆಗ ನಮ್ಮ ಮನಸ್ಸಿಗೆ ಇರಬೇಕಾದ ಉತ್ತಮ ಮೌಲ್ಯಾದರ್ಶಗಳು ನಶಿಸಬಾರದು. ಹಾಗಾದಂತೆ ನಮ್ಮ ಸಂಕಲ್ಪಗಳನ್ನು ಬಲಪಡಿಸಲು ಮತ್ತು ಅಹಿತಕರ ಪ್ರಭಾವಗಳನ್ನು ತಡೆಯಲು ಹೆಚ್ಚಿನ ಸತ್ವಯುತ ನಿರ್ಧಾರ ಮಾಡಿಕೊಳ್ಳ ಬೇಕಾಗುವುದು.

ಸಂಕಲ್ಪಿಸಿದ ಕಾರ್ಯದ ಪ್ರಯತ್ನದಲ್ಲಿ ಸೋತರೂ ಉತ್ಸಾಹವಿಲ್ಲದವರಾಗ ಕೂಡದು. ಪ್ರತಿಯೊಂದು ಸೋಲೂ ಜಯದ ಕಡೆಗೆ ಏರಲು ದೃಢ ನಿರ್ಧಾರ ಪಡೆವುದಕ್ಕಾಗಿರಬೇಕು. ನಿರ್ಧಾರವನ್ನು ವೀರಶಪಥದಂತೆ ಮಾಡಿಕೊಂಡರೆ ಮಾರ್ಗವು ಸರ್ವಥಾ ಯೋಗ್ಯವಿದ್ದಲ್ಲಿ ಖಂಡಿತ ವಾಗಿ ಜಯಶಾಲಿಗಳಾಗುವೆವು.

ಆದರೆ ಅಂಥ ನಿರ್ಧಾರದ ಮೊದಲು ಸ್ವವಿಮರ್ಶೆ ಅಥವಾ ಆತ್ಮ ಪರೀಕ್ಷೆಯಂಥದ್ದನ್ನು ನಡೆಸಿ ನಮ್ಮ ಕಾರ್ಯದೋಷಗಳ ಸ್ನೇಹಿತರಿಂದ ಮನದಟ್ಟು ಮಾಡಿಕೊಂಡು ಅವುಗಳನ್ನು ನೀಗಿಸಿಕೊಳ್ಳಲಿಕ್ಕೆ ಯತ್ನಿಸಬೇಕು. ನಮ್ಮ ನಿರ್ಧಾರಗಳನ್ನು ಬರೆದಿಟ್ಟುಕೊಂಡು ಮತ್ತೆ ಮತ್ತೆ ಸ್ಮರಿಸಿ ಓದಿ ಪರೀಶೀಲಿಸಿದಾಗ ದೋಷ ಕಳೆದು ಶುದ್ಧ ನಿರ್ಧಾರವುಳಿಯುತ್ತದೆ.

ಯೋಗ್ಯ ನಿರ್ಧಾರಗಳಲ್ಲಿ ಹೆಚ್ಚಿನವು (ಎಂದರೆ ಪ್ರಿಯವಾದುದನ್ನಲ್ಲ) ಅದು ಶ್ರೇಯಸ್ಸನ್ನು

ಒದಗಿಸಬೇಕು. ಅವುಗಳು ಪಾರಮಾರ್ಥಿಕವಾಗಿದ್ದರೆ ಚೆಂದ. ಲೋಕಕಲ್ಯಾಣಕ್ಕಾದರೆ ಸಾರ್ಥಕವಾಗುತ್ತವೆ.

ವಿವಿಧ ದುರಾಲೋಚನಾ ಮಾರ್ಗಗಳು ಅಪಾಯಕಾರಿ ವಿಷದಂತೆ ನಮ್ಮ ಸಾಧನೆಯನ್ನು ಮುಗಿಸಿಬಿಟ್ಟರೆ, ಶಾಸ್ತ್ರೀಯ ಚಿಂತನಾಮಾರ್ಗವು ಅಮೃತದಂತಾಗುವುದು.

ಸಂಕಲ್ಪ ಮಾಡುವುದು ಸುಲಭ. ಆದರೆ ನಿರ್ಧಾರ ಪಾಲನೆ ಮಾಡಲು ಒಬ್ಬೊಬ್ಬರ ಪರಿಸ್ಥಿತಿ, ಅವರು ನಡೆಸುತ್ತಿರುವ ವೃತ್ತಿ, ಉದ್ಯೋಗ ವ್ಯವಹಾರಗಳು ಅವಕಾಶ ಮಾಡಿಕೊಡುವುದಿಲ್ಲ. ಈ ಮಾತನ್ನು ಪ್ರತಿಯೊಬ್ಬರೂ ಸದಾ ನೆನಪಿನಲ್ಲಿಟ್ಟುಕೊಂಡರೆ ಶಪಥ ಹಾಕಿ ಆಣೆ ಭಾಷೆ ಮಾಡುವ ಚಾಪಲ್ಯವು ದೂರವಾಗುವುದು.

ಕೆಲವರು ಇಂತಿಂತಹ ದಿನದಲ್ಲಿ, ಅಥವಾ ಕಾಲಾವಧಿಯಲ್ಲಿ ಹೀಗೆ ಹೀಗೆ ಮಾಡುತ್ತೇವೆ ಎಂಬ ಕಾರ್ಯಕ್ರಮ ಹಾಕಿಯೂ (ನೂತನ ವರ್ಷ ವರ್ಧಂತಿಗೆ ನಿರ್ಣಯ ಹಾಕಿಕೊಂಡಂತೆ) ಸಂಕಲ್ಪ ಮಾಡಿಯೂ ಮತ್ತೆ ಮರೆತೇ ಬಿಡುತ್ತಾರೆ. ಅದೆಲ್ಲ ಅಸಾಧ್ಯವೆಂದು ಕೈಬಿಡುತ್ತಾರೆ. ಆದರೆ ಇಂತಹ ನಿರ್ಧಾರಗಳನ್ನು ಬಲಪಡಿಸಲು ದೇವರ ಅನುಗ್ರಹವನ್ನು ಸಮರ್ಥಿಸಿಕೊಂಡರೆ ಮತ್ತು ನಿರ್ಧಾರಗಳನ್ನು ಮತ್ತೆ ಮತ್ತೆ ಸ್ಥಾಪಿಸಿಕೊಳ್ಳುತ್ತಿದ್ದರೆ ನಿರ್ಧಾರಗಳು ಫಲಿಸಿಯಾವು. ಇಲ್ಲವೆ ಸಾಕಷ್ಟು ಸತ್ಪರಿಣಾಮ ಕೊಟ್ಟಾವು.

ನಾವು ಅಹಮಿಕೆಯಿಂದ ಈ ಆಲೋಚನೆ ನನ್ನದು ಎಂದು ಪ್ರಜ್ಞಾಪೂರ್ವಕವಾಗಿ ಹೇಳಿದರೂ, ಅದು ಒಂದು ಕೆಳಗಿನ ಹಂತದಲ್ಲಿ ನನ್ನೊಳಗಿನಿಂದ ಕೆಲಸ ಮಾಡುವ ಸ್ವಭಾವಗುಣ (Instinct) ಅಥವಾ ಅರಿವಿಲ್ಲದ ಜ್ಞಾನದ್ದು (Unconscious Thought) ಆಗಿರಬಹುದು.

ಆಗ ಮಾಡುವ ಸಂಕಲ್ಪವು ಹೀನವಾದುದು. ಎಷ್ಟೋ ಸಲ ಮುಕ್ತಿಯ ವೃತ್ತಿಗಳಾಚೆ ಎತ್ತರ ಸ್ತರದಲ್ಲಿ, ಎಂದರೆ ಅತೀಂದ್ರಿಯ ಅವಸ್ಥೆಯಲ್ಲಿ ಯೋಗ್ಯ ಸಂಕಲ್ಪ ಒದಗುವುದು. ಆದರೆ ಏಕಾಗ್ರತಾ ಚಿತ್ತದಲ್ಲಿ ಮಾಡುವ ಸಂಕಲ್ಪವೇ ನಮಗೆ ತಿಳಿದುದರಲ್ಲಿ ಯೋಗ್ಯವಾದುದು.

ತಾತ್ಕಾಲಿಕ ಆಶೆಗಳಲ್ಲ, ಬಹುಕಾಲದ ಆಶಯಗಳ ನೆಲೆಗಳಾಗಿ ಸಂಕಲ್ಪಗಳು ಜೀವನದುದ್ದಕ್ಕೂ ಪ್ರವಾಹದಲ್ಲಿ ಏಳುತ್ತಲೇ ಇರುವವು. ಆದರೆ ಇವು ಅಲೆಗಳಲ್ಲ. ಸಾರ್ಥಕ ಜೀವಿಯು ಸಂಕಲ್ಪವನ್ನು ಕವಲೊಡೆದು ಬೆಳೆಸದೆ ಏಕಮುಖಿಯಾಗಿಸಿ ಅದರಿಂದ ಜಗದೀಶ್ವರನ ಶೋಧವನ್ನು ಮಾಡುವನು.

ನಾನು ಈಶ್ವರನತ್ತ ದೃಷ್ಟಿ ಹರಿಸಿದರೆ ಕಣ್ಣೆದುರಿನಲ್ಲಿರುವ ನನ್ನ ಪ್ರಪಂಚವು ಸರಿಯಾಗಿ ನನಗೆ ಹೊಂದಿಕೊಳ್ಳುವುದೋ ಇಲ್ಲವೋ ಎಂದು ಸಂಶಯಪಟ್ಟರೆ ಅದು ಪರಮಾರ್ಥ ಸಾಧನೆಗೆ ಬಾಧಕವಾಗುವುದು (ಇದಕ್ಕೆನ್ನುವರು ವಿಚಿಕಿತ್ಸಾ ಎಂದು) ಜೀವನವನ್ನು ಪ್ರಪಂಚದೊಳಗೇ (ಅಥವಾ ಸಂಸಾರದೊಳಗೆ) ಬಂಧಿಸದೆ ಈಶ್ವರನ ಚಿದಂಬರದಲ್ಲಿ ಬೆರೆಸುವ ಅದ್ವಿತೀಯ ಶಕ್ತಿಗಳು ಶ್ರದ್ಧೆಯಲ್ಲಿ ಇರುತ್ತವೆ. ಈ ದೈವೀ ಶ್ರದ್ಧೆಯಿಂದ ವಿದ್ಯಾನುಭವ ಸಿದ್ಧಿಯಾಗುವುದು. ಈಶ್ವರನನ್ನು ಪಡೆಯ ಬೇಕೆಂಬ ನಿಶ್ಚಯವೊಂದೇ ಭೀತಿಗಳನ್ನೆಲ್ಲ ಒರೆಸಿ ಬಿಡುವುದು.

ಆಧ್ಯಾತ್ಮಿಕ ಸಾಧನೆಗಾಗಿ ಕೆಳಕಂಡ ಕೆಲವು ನಿರ್ಧಾರಗಳನ್ನು ಮಾಡಬಹುದು.

1. ನಾನು ವೃತ್ತಿ ಕೆಲಸಕ್ಕೆ ಜನಸಾಧನೆಗೆ ಇಂತಿಷ್ಟು ಸಮಯ ಇಟ್ಟುಕೊಳ್ಳುತ್ತೇನೆ.

2. ದೇಹ ಶುದ್ಧಿಗಾಗಿ ಸ್ನಾನಕ್ಕಾಗಿ ಇಂತಿಷ್ಟು ಸಮಯ ಇಟ್ಟು ಕೊಳ್ಳುತ್ತೇನೆ.

3. ಇಂತಿಷ್ಟು ಕಾಲ ಮೌನ, ಜಪ, ಪೂಜೆ, ಇತ್ಯಾದಿ ಆರಾಧನೆಗಾಗಿ ಇರುತ್ತದೆ.

4. ಜನ ಸಂಪರ್ಕಕ್ಕಾಗಿ ಕೆಲವು ಕ್ರಮ ತೆಗೆದು ಕೊಳ್ಳುತ್ತೇನೆ. ಪರೋಪಕಾರ ಮಾಡುತ್ತೇನೆ. ಇಂತಹ ನಿರ್ಧಾರದ ಬದಲು ಇಂದಿನ ಕಾಲದಲ್ಲಿ ಜನ ತೆಗೆದು ಕೊಳ್ಳುವ ಕೀಳು ನಿರ್ಧಾರಗಳು ಹೀಗಿವೆ.

1. ಇಂಥ ಹೆಸರಿನ ಸಿನೆಮಾ. ಟಿವಿ ಸೀರಿಯಲ್, ಡ್ಯಾನ್ಸ್ ಮ್ಯೂಸಿಕ್ ಕಾರ್ಯಕ್ರಮಕ್ಕಾಗಿ ಇಂತಿಷ್ಟು ಹೊತ್ತು ಬೇಕು.

2. ತಿಂದು ಕುಡಿದು, ಬಟ್ಟೆ ಬರೆ ಭೂಷಣಗಳನ್ನು ಧರಿಸಲು, ಉತ್ತಮ ಗೃಹಶೈಲಿಯಲ್ಲಿರಲು ಬಾಹ್ಯಾವರಣದ ಶೈಲಿಯಲ್ಲಿರಲು ಹೀಗೆ ಹೀಗೆ ಮಾಡಬೇಕಿದೆ.

3. ಹೇಗಾದರೂ ಸಂಪತ್ತು, ಅಧಿಕಾರ, ಯಶಸ್ಸು ಒದಗಿಸಿಕೊಳ್ಳಲು ಪ್ರಯತ್ನಿಸಬೇಕಿದೆ... ಯಾಕೆ ಇಂಥ ಕೀಳು ನಿರ್ಧಾರಗಳು ಬೇಕು, ನೀವೇ ಯೋಚಿಸಿರಿ. ವೀರ ಸಂಕಲ್ಪ ತೆಗೆದುಕೊಳ್ಳಿರಿ. ಪಲಾಯನವಾದ ಬೇಡ. •

## ಲಕ್ಷ್ಮೀರಮಣ - ಉರುಫ್ - ಸರಸ್ವತಿರಮಣ - ನಾ ಕಂಡಂತೆ

*(ಪುಟ 7ರಿಂದ )*

ಈ ಶಂಕರನಾರಾಯಣ ಬೊಂಬಾಯಿಯಿಂದ ಎಂದು ಗಡಿಬಿಡಿಯಾಗಿರಬೇಕು. ಮದುವೆಯಾಗಿ ಬಂದ ಮೇಲೆ, ರಮಣನನ್ನು ಗ್ರೀಟಿಂಗ್ ತಲುಪಿತಾ ಎಂದು ಕೇಳಲು ಬುಡುಬಾಯಿ ಇಲ್ಲವಲ್ಲಾ ! ಆಗ ಏನಾಗಿರಬಹುದೆಂದು ಊಹಿಸಿಕೊಂಡೆ. ಅಂತೂ ರಮಣ ದಂಪತಿಗಳು ಸಂಸಾರ ಹೂಡಿದ ಎಷ್ಟೋ ಕಾಲದ ನಂತರ ಶ್ರೀಮತಿ ರಮಣರಿಂದ ಆದ ಪರಿಪಾಟಿನ ಪ್ರಸಂಗ ವಿಚಿತವಾಗಿ ಎಲ್ಲರೂ ನಕ್ಕಿದ್ದೇನಕ್ಕಿದ್ದು. ತಲೆ ಬರಹದಲ್ಲಿ ಉರುಫ್ ಸರಸ್ವತಿ ರಮಣ ಎಂದು ಏಕೆ ಬರೆದೆನೆಂಬುದು ತಿಳಿಯಿತಲ್ಲಾ.

ಹೀಗೆ ಪ್ರಾರಂಭವಾದ ನಮ್ಮ ಸ್ನೇಹ ಐವತ್ತಾರು ವರ್ಷಗಳ ಕಾಲ ನಿಕಟವಾಗಿ ಬೆಳೆದು ಬಂತು. ಅಂದು ಸೆಪ್ಟೆಂಬರ್ 13ರಂದು ಟಾನ್ಸೇನಿಯಾದಿಂದ ಬಂದಿದ್ದ ನನ್ನ ಮಗ ದಿನೇಶನನ್ನು ನೋಡಲು ಮೈಸೂರು ಕಾಲನಿ ಮನೆಗೆ ಹೋಗುತ್ತಾ ಮೊದಲು ಗೇಟಿನ ಬಳಿ ಇದ್ದ ಪುಟ್ಟಣ್ಣಯನವರ ಮನೆಗೆ ಹೋದೆ. ಅಲ್ಲಿ ಶ್ರೀಮತಿ ಪುಟ್ಟಣ್ಣಯನವರು ಹಿಂದಿನ ಸಾಯಂಕಾಲ ಲಕ್ಷ್ಮೀರಮಣನವರು ಕೊನೆಯುಸಿರು ಎಳೆದರೆಂದು ತಿಳಿಸಿದರು. ಹೆಚ್ಚುಕಡಿಮೆ ನನ್ನಷ್ಟೇ ವಯಸ್ಸು ಒಬ್ಬೊಬ್ಬರಾಗಿ ಹೋಗುತ್ತಿದ್ದಾರೆ ಎಂದು ಖೇದಪಟ್ಟುಕೊಂಡೆ. ಮಾರನೆ ದಿನವೇ ಅವರ ಮನೆಗೆ ಹೋಗಿ ಸರಸ್ವತಿ ಭಗಿನಿಗೆ ಹಾಗೂ ಆ ಸಂಸಾರದ ಎಲ್ಲರೊಂದಿಗೂ ಅವರ ದುಃಖದಲ್ಲಿ ನಾನು ಭಾಗಿಯೆಂದು ನನ್ನ ಅಳಲನ್ನು ತೋಡಿಕೊಂಡೆ.

ಶ್ರೀ ವಿ.ಕೆ. ಮೂರ್ತಿಯವರೊಂದಿಗೆ ಸರಿಸಮವಾಗಿ ಚಲನ ಚಿತ್ರದ ಮುಂಬಯಿಯ ಬಾಲಿವುಡ್‌ನ ಪ್ರಬುದ್ಧ ಫೋಟೋಗ್ರಾಫ್ ಲಕ್ಷ್ಮೀರಮಣ ಇನ್ನು ನಮ್ಮೊಂದಿಗಿಲ್ಲ. ಆದರೆ ಆಸಹಯೋಗ, ಆ ಸವಿನೆನಪು, ಆ ಅಕಳಂಕಿತವಾದ ಆ ವ್ಯಕ್ತಿಯ ಸವಿನೆನಪು ಚಿರುಕನ. •

## ಗುರುತು ಕಥಾ ಸ್ಪರ್ಧೆ - 2005

ಮುಂಬಯಿ ಪ್ರಕಾಶಿತ ಗುರುತು ಪತ್ರಿಕೆಯು ಕಥಾ ಸ್ಪರ್ಧೆಯನ್ನು ಆಯೋಜಿಸಿದ್ದು ಕಥೆಗಾರರಿಂದ ಕಥೆಗಳನ್ನು ಆಹ್ವಾನಿಸುತ್ತಿದೆ. ಕಥಾ ಸ್ಪರ್ಧೆಯ ವಿವರಗಳು ಈ ಕೆಳಗಿನಂತಿವೆ:

- ಕಥೆಯು ಫುಲ್‌ಸ್ಕೇಪ್ ಹಾಳೆಯ ಒಂದು ಮಗ್ಗುಲಿನಲ್ಲಿದ್ದು 8-10ಪುಟಗಳನ್ನು ಮೀರಿರಬಾರದು.
- ಕಥೆಯು ಹಿಂದೆ ಎಲ್ಲಿಯೂ ಪ್ರಕಟವಾಗಿರಬಾರದು. ಅನುವಾದಿತ ಕತೆಗಳಿಗೆ ಆಸ್ಪದವಿಲ್ಲ.
- ಕಥೆಗಾರರು ತಮ್ಮ ವಿಳಾಸ, ಭಾವಚಿತ್ರ ಮತ್ತು ಸ್ವಪರಿಚಯ ಪತ್ರವನ್ನು ಕಥೆಯ ಜೊತೆಗೆ ಪ್ರತ್ಯೇಕವಾಗಿ ಲಗತ್ತಿಸಿರಬೇಕು.
- ಕಥೆ ನಮಗೆ ತಲುಪಬೇಕಾದ ಕೊನೆಯ ದಿನಾಂಕ 15-12-2005
- ಅಪ್ರಕಟಿತ ಕಥೆಗಳನ್ನು ಹಿಂದಿರುಗಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಸ್ವವಿಳಾಸವುಳ್ಳ ಲಕೋಟೆಯನ್ನು ಲಗತ್ತಿಸಿರಬೇಕು.
- ಕಥೆಯ ಪ್ರತಿಕೃತಿ (Zerox) ಯನ್ನು ಸ್ವೀಕರಿಸಲಾಗುವುದಿಲ್ಲ. ಬಹುಮಾನ ಮೊತ್ತ ಪ್ರಥಮ: 5000/, ದ್ವಿತೀಯ : 3000/, ತೃತೀಯ 2000/-

ಕಥೆ ತಲುಪಬೇಕಾದ ವಿಳಾಸ:

*The Editor*

**GURUTU KATHA SPARDHE - 2005**

Billawa Jagriti Balaga,
1 Motiwala Mansion,
Nadirshah Sukhia Street, Fort,
Mumbai-400 001.

*Book Review* — ***- M.A.N.Prasad***

## Listen Janamejaya and other Plays

| | | |
|---|---|---|
| Title | : | Listen Janamejaya And Other Plays<br>An anthology of Adya Rangacharya's plays translated into English |
| Author | : | Many authors; |
| Edited by | : | G.S.Amur |
| Publishers | : | Sahitya Academy, New Delhi |
| Pages | : | 443, Price: Rs.200/- |

As a tribute to the great playwright Adya Rangacharya on his birth centenary, an anthology of seven plays of Adya Rangacharya, translated into English has been published under the title of " Listen Janamejaya And Other Plays " by the Sahitya Academy, New Delhi. This publication was released recently. The book is edited by well-known writer and critic G.S.Amur, who has also written the introduction. This introduction beautifully profiles Adya Rangacharya and his works. While Adya Rangacharya wrote a large number of plays, a representative selection has been made here and it includes some of his best known plays. All the translators are eminent writers. Daughters of Adya Rangacharya, Usha Desai and Shashi Deshpande have also contributed to the translations. A brief note on the translators is given at the end. The plays presented in this anthology and the translators are:

1. Shokachakra by Ramachandra Sharma
2. Darkness and Light by G.S.Amur
3. Listen Janamejaya by Padma Ramachandra Sharma
4. Sanjivani by Usha Desai
5. Rangabharata by K.Raghavendra Rao
6. Three Doors to Heaven by Usha Desai
7. Forgive Us Our Sins by Shashi Deshpande

The translations retain the spirit and flow of the original work and make a good reading. The volume has been brought out beautifully in terms of the quality of production. It is a must for all theatre institutions and theatre lovers.

The Mysore Association, Bombay has been actively connected with the celebrations of the birth centenary of Adya Rangacharya at Mumbai. It is matter of great happiness to all of us at the Association that one more excellent work has been brought out on this occasion. Nesaru congratulates all those involved in this effort, particularly Dr.Usha Desai - who is our member - and Dr. Shashi Deshpande.

## Nanna Nalla - My Beloved

English Translation by **Dr.G.V.Kulkarni** of Madhurachenna's 'Nanna Nalla' in Kannada

| | | |
|---|---|---|
| Title | : | My Beloved |
| Author | : | Kannada Original by Madhurachenna |
| English Translation by | : | Dr.G.V.Kulkarni |
| Publishers | : | Harshvardhan Prakashan |
| Pages 170 | | Price Rs.75/- |

Chennamallappa Sidhalingappa Galagali popular as Madhurachenna was born in 1903. He showed spiritual leanings at the early age of twelve. By the time he was twenty, he came under the influence of Sri Aurabindo. One can see the influence of Sri Aurobindo on the author in most of his works. He was one of the trimurtis of Geleyara Gumpu, the other two being Bendre and Gokak. He lived up to the age of 50 years.

Nanna Nalla is the quintessential song of the quest for the eternal. It consists of 102 short verses of four lines each. It is the passionate cry of the devoted to meet the Lord Supreme. The pain and suffering that the devotee goes through, being unable to meet his Lord is very well brought out in these poems. The author assumes the nayaka, nayika form of relationship with the Lord and pours forth his feelings of love. longing, pining, frustration, disgust, ecstasy, etc. He transcends the barrier of senses and goes into a higher spiritual plane. Like for example:

ಹನ್ನೆರಡು ತೊಂಬಿಲ್ಲ ಕನ್ನಕ್ಕಿ ನಾನಂದು
ನನ್ನನಲ್ಲನ ಕಡೆಗೆ ಮರುಳುಗೊಂಡೆ
ಇನ್ನೇನುಹೇಳುವೆನು ಇಂದಿಗಿಪ್ಪತ್ತಾರು
ಈಸೊಂದು ದಿನ ಕೊರಗಿ ಗೊತ್ತುಗಂಡೆ

Then I was twelve, an innocent virgin maid
I fell in love with thee, O! My Lord Supreme
Now I am twenty six, what more shall I say
Having pined all these years, I realized thee at last

And again

ಬರುವುದೇನುಂಟೊಮ್ಮೆ ಬರುವಕಾಲಕೆ ಬಹುದು
ಬಯಕೆ ಬರುವುದರ ಕಣ್ಸನ್ನೆ ಕಾಣೋ ।
ಅರಿಯದಾ ಹವಣಿಕೆಯು ಜೀವದೇವನ ಲೀಲೆ
ದೇವದೇವನ ಗೂಢ ವಿಧಿಯು ಕಾಣೋ

Whatever is to come, comes at the chosen time
Aspiration heralds the process of fulfillment
It's the unknown call, it's the play of life
It's the secret destiny.
Designed by the Lord of Lords

The author has done a great service by translating this work into English and making it reach a larger number of readers. Otherwise, perhaps many would not possibly know of such an excellent work lying around and would have missed reading it. The book also carries the original Kannada poems along with he translations, so that for those who know both the languages the pleasure is doubled. The book also has write-ups on Madhurachenna by other eminent persons who knew him closely and this helps the reader to get a proper perspective of the work. The translation is easy to read and generally good. Some of the verses in English are very well done. At places one might feel a little dissatisfied, but then that is largely due to the limitations under which a translator has to work. The words of a language carry certain nuances that go with it due to the culture and tradition in which the language is used. When we translate a work from that language to another, these finer nuances could suffer. Hence the translators task is a very difficult one. Jeevi needs to be commended on this excellent work.

The book has been produced well. Illustrations help in making the book visually appealing. This is a good tribute to the departed soul on his birth centenary. ●

# सुभाषितानि SUBHAASHITAANI
## Words of Wisdom

अकृत्वा परसन्तापम् अगत्वा परनम्रताम्।
अनुत्सृज्य सतां वर्त्म यदल्पमपि तद् बहु॥

Akrutva Parasantaapam, Agatvaa Paranamrataam
Anustrjya Sataam Vartma, Yadalpamapi tad bahu.

In today's world if we are able to achieve even a little without troubling others, without having to born before the wicked, without transgressing the path shown by the noble ones, we should consider ourselves as having achieved a lot. The verse thus emphasises the need to take to the right means to achieve the desired end.

अद्रोहः सर्वभूतेषु कर्मणा मनसा गिरा।
अनुग्रहश्च दानं च सतां धर्मः सनातनः॥

Adrohah Savvabhuteshu Karmana Manasaa giraa
Anugrahascha Daanam Cha Sataam Dharmah Sanaatanah

The perpetual good conduct that the noble ones follow, consists in doing no harm to any creature through action, thoughts or words and also in kindness and charitable disposition towards one and all.

अयं निजः परो वेति गणना लघुचेतसाम्।
उदार चरितानां तु वसु धैव कुटुम्बकम्॥

Ayam nijah paroveti gananaa Laghu chetasaan
Udaara Charitaanaam tu Vasudharva Kutumbakam.
It is only the narrow minded people who look upon others as one's own or as belonging to others. For the large hearted ones, the entire world is one family.

अमन्त्रमक्षरं नास्ति नास्ति मूलमनौषधम्।
अयोग्यः पुरुषो नास्ति योजकस्तत्र दुर्लभः॥

Amantramaksharam Naasti
Naasti Moolamanaushadham
Ayogyah Purusho naasti
Yojakasta tra Durlabhah

There is no syllable without a sacred spell in it, there is no herb without medicinal power, there is no individual without some capability. The Dearth indeed is in the one who can recognise it. It short there is nothing in nature that doesn't serve a purpose. It is for us to discover.

अर्थ भवन्ति गच्छन्ति लभ्यते च पुनः पुनः।
पुनः कदापि नायाति गतं तु नवयौवनम्॥

Arthaa Bhavanti Gachchnti Labhyate cha Punah Punah
Punah Kadaapi Naayaati Gatam tu Navayauvanam
Wealth gets created, gets lost and is possible to acquire it again and again.
But youth once gone can never come back. So make the best of it when you are young.

आयुषः क्षण एकोऽपि सर्वरत्नैर्न लभ्यते।
नीयते तद् वृथा येन प्रमादी सुमहानसौ ॥

Aayushah Kshana Ekopi
Sarvaratnairna Labhyate
Neeyate Tad Vrthaa Yena
Pramaddee Sumahaanasau.

Even a single moment of life cannot be acquired by any amount of jewels. The one who spends it wastefully is indeeed doing a blunder. Time once lost cannot be got back at any cost. It is rightly said that "Time and tide waits for none". It is indeed a crime to waste even a moment which is so precious.

आलस्यं हि मनुष्याणां शरीरस्थो महारिपुः ।
नास्त्युद्यमसमो बन्धुः कृत्वा यं नावसीदति ॥

Aalasyam hi Marmshyaanaam
Sareerastho Mahaaripuh
Naastyu Dyamasamo Bandhuh
Krutvaa Yam Naavaseedati
Lethargy is indeed the inbuilt enemy in man. There is no friend like enterprises embarking on which one never has to regret.

आशा नाम मनुष्याणां काचिदाश्चर्य श्रृङ्खला।
यया बध्दा तु धावन्ति मुक्तास्तिष्ठन्ति पङ्गुवत्॥

Aashaa Naama Manushyaanaam
Kaachidascharya Srunkhalaa
Yagaa Baddhaa tu Dhaavanti
Muktastishthanti Panguvat

The thing called desire is indeed a unique chain. It is so because those who are bound by it run after things and those who are free from its stay put like a lame person while those who are free from it stay, but like a lame person. While those bound by chains normally stay but in a place and those who are free from it run around.
Those who are after satisfying their desires, they hanker after things are one after the other, the Contended people lead a steadfast life findly happiness within themselves.

*Compiled by **Mrs. Janaki S. Mani***
*Mumbai*

No. TECH/47-202/MBI/2003-05
Date of Posting : 14-11-2005

## ಸುತ್ತಮುತ್ತ

### ಕರ್ನಾಟಕ ಸಂಘ ಸಭಾಗೃಹದಲ್ಲಿ ನಾಗತಿಹಳ್ಳಿ ಚಲನಚಿತ್ರೋತ್ಸವ ಉದ್ಘಾಟನೆ

ಅಪ್ಪಟ ರೈತನ ಮಗ, ಸಮಾಜವಾದಿ, ಶಿವರಾಮ ಕಾರಂತ, ನಂಜುಂಡ ಸ್ವಾಮಿ ಅಂಥವರ ಜೊತೆ ಓಡಾಡಿದ ನಾಗತಿಹಳ್ಳಿ, ಚಂದ್ರಶೇಖರ್ ಸಾಂಸ್ಕೃತಿಕ ಲೋಕದ ಹೋರಾಟಗಾರರು ಆಗಿದ್ದಾರೆ. ಕರ್ನಾಟಕ ಸಂಘವು ಮೂರು ದಿನಗಳ ಕಾಲ ನಾಗತಿಹಳ್ಳಿ ಚಲನಚಿತ್ರೋತ್ಸವ ಏರ್ಪಡಿಸಿ ಉತ್ತಮ ಸದಭಿರುಚಿಯ ಚಿತ್ರಗಳನ್ನು ಮುಂಬಯಿ ಕನ್ನಡಿಗರಿಗೆ ನೀಡುತ್ತಿರುವುದು ಅಭಿಮಾನದ ಸಂಗತಿ ಎಂದು ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು ಇದರ ಗೌ. ಪ್ರಧಾನ ಕಾರ್ಯದರ್ಶಿ ಡಿ.ಕೆ. ಚೌಟ ಹೇಳಿದರು.

ನಾಗತಿಹಳ್ಳಿಯವರ ಮನೆಯ ಹೆಸರೇ 'ಸಿಹಿ-ಕನಸು'. ಅವರೊಬ್ಬ ಪ್ರತಿಭಾವಂತ ಶ್ರೇಷ್ಠ ಚಿತ್ರ ನಿರ್ದೇಶಕ. ಮೈಲುಕಲ್ಲಿಗೆ ಪೈಂಟುಕೊಟ್ಟು ಬದಲಿಸಿ ಕನಸು ಕಟ್ಟಿದವರು ಎಂದು ಶ್ಲಾಘಿಸಿದ ಚೌಟರು, ಈ ಉತ್ಸವದಲ್ಲಿ ಪ್ರದರ್ಶಿಸಲ್ಪಡುವ 'ಅಮೇರಿಕಾ ಅಮೇರಿಕಾ', 'ಕೊಟ್ರೇಶಿ ಕನಸು' ಮತ್ತು 'ಅಮೃತಧಾರೆ' ಈ ಮೂರೂ ಚಿತ್ರಗಳು ಸದಭಿರುಚಿಯ ಶ್ರೇಷ್ಠ ಚಿತ್ರಗಳಾಗಿವೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಮುಖ್ಯ ಅತಿಥಿ ನಾಗತಿಹಳ್ಳಿ ಚಂದ್ರಶೇಖರರು ಈ ಸಂದರ್ಭದಲ್ಲಿ ಮುಂಬಯಿ ಮತ್ತು ತನಗಿರುವ ಸಂಬಂಧವನ್ನು ನೆನಪಿಸಿಕೊಂಡರು. ಸೃಜನಶೀಲ ಬರಹಗಾರ ಕುಟುಂಬದ ಜವಾಬ್ದಾರಿಯ ಜೊತೆ ಸಮಾಜದ ಜವಾಬ್ದಾರಿಯನ್ನೂ ಚಿಂತಿಸುವವ, ಅದನ್ನು ನಾಟಕವೋ-ಸಿನಿಮಾ ರಂಗದಲ್ಲೋ ಅಭಿವ್ಯಕ್ತ ಪಡಿಸಬಹುದು.

ಅಧ್ಯಕ್ಷತೆ ವಹಿಸಿದ ಸಂಘದ ಅಧ್ಯಕ್ಷ ಎಂ.ಎಂ. ಕೋರಿಯವರು ಕರ್ನಾಟಕ ಸಂಘವು ಸಾಂಸ್ಕೃತಿಕ ಚಟು ವಟಿಕೆಗಳಿಗೆ ನಿರಂತರ ಪ್ರೋತ್ಸಾಹ ನೀಡುತ್ತಾ ಬಂದಿದೆ. ಚಲನಚಿತ್ರ ಮಾಧ್ಯಮವು ಇಡೀ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡಿ ಜನರನ್ನು ಪರಸ್ಪರ ಬೆಸೆದು ಕೊಳ್ಳುವಂತೆ ಮಾಡುವ ಸಾಮರ್ಥ್ಯವುಳ್ಳದ್ದು. ಹಾಗಾ ಗಿಯೇ ಉತ್ತಮ ಅಭಿರುಚಿಯ ನಾಗತಿಹಳ್ಳಿಯವರ ಚಲನಚಿತ್ರಗಳ ಉತ್ಸವವನ್ನು ಸಂಘವು ಹಮ್ಮಿಕೊಂಡಿದೆ ಎಂದರು.

### ಸಿ.ಆರ್. ಶ್ಯಾಮಲ ಅವರಿಗೆ ಡಾಕ್ಟರೇಟ್ ಪದವಿ



ಮುಂಬಯಿ : ಸಿ.ಆರ್. ಶ್ಯಾಮಲ ಅವರು ಬರೆದು ಸಲ್ಲಿಸಿದ 'ಪೂರ್ವ ಕರ್ನಾಟಕದ ಪಾಳೆಯ ಗಾರರು ಒಂದು ಅಧ್ಯಯನ' ಎಂಬ ಸಂಶೋಧನ ಮಹಾ ಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವ ವಿದ್ಯಾಲಯವು ಅವರಿಗೆ ಕನ್ನಡದಲ್ಲಿ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

ಶ್ಯಾಮಲ ಅವರು ಎಂ.ಡಿ. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ವಿಶ್ವನಾಥ ಕಾರ್ನಾಡ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದರು.

### ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ದೃಕ್ ಶ್ರವಣದ ಉದ್ಘಾಟನೆ




*ವಡಾಲ ಎಸ್.ಕೆ.ಇ.ಎಸ್. ಶಾಲೆಯಲ್ಲಿ ಬೃಹನ್ ಮುಂಬೈ ಮಹಾನಗರ ಪಾಲಿಕೆಯ ಶಿಕ್ಷಣ ಸಮಿತಿಯ ಅಧ್ಯಕ್ಷರೂ ಹಾಗೂ ಮಹಿಮ್ ವಿಭಾಗದ ನಗರ ಸೇವಕರಾದ ಶ್ರೀ ಪ್ರಕಾಶ ಅಹಿರೆ ಅವರು, ಕನ್ನಡ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಿಸುತ್ತಿರುವುದು. ಶಾಲಾ ಕಾರ್ಯಕಾರಿ ಮಂಡಳಿಯ ಕಾರ್ಯದರ್ಶಿಗಳಾದ ಎಸ್. ಸುಬ್ರಮಣಿ ಅವರೂ ಇದ್ದಾರೆ.*

ಮುಂಬೈ : ವಡಾಲದ ಎಸ್.ಕೆ.ಇ.ಎಸ್. ಶಾಲೆಯ ಪರಿವೀಕ್ಷಕಿ ಶ್ರೀಮತಿ ಪಾರ್ವತಿ ದೇಶಪಾಂಡೆಯವರು ಕೊಡ ಮಾಡಿದ ದೃಕ್ - ಶ್ರವಣ ವಿಭಾಗದ ಉದ್ಘಾಟನೆಯನ್ನು ನೆರವೇರಿಸಿ ಹಾಗೂ ಶಾಲಾ ಹಳೆಯ ವಿದ್ಯಾರ್ಥಿ ಒಬ್ಬರು ಕೊಡ ಮಾಡಿದ ರೂ. 50 ಸಾವಿರವನ್ನು ಮುಂಬಯಿ ಮಹಾನಗರ ಪಾಲಿಕೆಯ ಕನ್ನಡ ಶಾಲೆಗಳಿಗೆ, ಕನ್ನಡ ಹಗಲು ಶಾಲೆ, ಕನ್ನಡ ರಾತ್ರಿ ಶಾಲೆಯ ಸುಮಾರು 164 ಅರ್ಹ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ಬೃಹನ್ ಮುಂಬಯಿ ಮಹಾನಗರ ಪಾಲಿಕೆಯ ಶಿಕ್ಷಣ ಸಮಿತಿಯ ಅಧ್ಯಕ್ಷರೂ ಹಾಗೂ ಮಾಹಿಮ್ ವಿಭಾಗದ ನಗರ ಸೇವಕರಾದ ಶ್ರೀ ಪ್ರಕಾಶ ಅಹಿರೆಯವರು ವಿತರಿಸಿದರು.

ಈ ಸಂದರ್ಭದಲ್ಲಿ ಶಾಲಾ ಮಾಜಿ ಪರಿವೀಕ್ಷಕಿ ಶ್ರೀಮತಿ ಪಾರ್ವತಿ ದೇಶಪಾಂಡೆ, ಶಾಲಾ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಮಂಜುನಾಥಯ್ಯ. ಉಪಾಧ್ಯಕ್ಷ ಶ್ರೀ ಎಸ್.ಕೆ. ಅಯ್ಯಂಗಾರ್ ಹಾಗೂ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಾ ರಾವ್ ಇವರು ಉಪಸ್ಥಿತರಿದ್ದರು.

### ಜನಮನ ರಂಜಿಸಿದ ಗಾಯನ




ಡೊಂಬಿವಲಿಯ ಶ್ರೀ ಗುರುವಾಯೂ ರಪ್ಪನ್ ಮಂದಿರದಲ್ಲಿ ನವರಾತ್ರಿ ಪ್ರಯುಕ್ತ ಏರ್ಪಡಿಸಿದ್ದ ಸಂಗೀತೋತ್ಸವದಲ್ಲಿ ಮೈಸೂರು ಸಂಗೀತ ವಿದ್ಯಾರ್ಥಿಗಳಾದ ಕುಮಾರಿ ಅರುಣ ದುವ್ವಾರಿ ಮತ್ತು ಸುಶೀಲಾರಾವ್ ನಡೆಸಿದ ಸಂಗೀತ ಕಚೇರಿಯು ಜನ ಮನರಂಜಿಸುವಲ್ಲಿ ಯಶಸ್ವಿಯಾಯಿತು.

ಈ ಯುವ ಕಲಾವಿದೆಯರು ಕಾಂಭೋಧಿ ವರ್ಣದೊಂದಿಗೆ ಕಾರ್ಯ ಕ್ರಮ ಆರಂಭಿಸಿ ವೈದ್ಯನಾಥ ಅಯ್ಯರ್ ರವರ 'ಮಹಾಗಣಪತೆ' (ಹಂಸಧ್ವನಿ)ಯನ್ನು ಸ್ವರ ಪ್ರಸ್ತಾರದೊಂದಿಗೆ ಹಾಡಿದರು. ಶ್ರೀ ಪುರಂದರದಾಸರ ಓಡಿಬಾರಯ್ಯ'' (ಭೈರವಿ)' 'ಕೃಷ್ಣಬಾರೋ' (ಕಾಪಿ) ದೇವರ ನಾಮಗಳು ಭಾವ ಪೂರ್ಣವಾಗಿ ಮೂಡಿ ಬಂದುವು. ಅಂದಿನ ಕಚೇರಿಗೆ ಮುಖ್ಯವಾಗಿ ಆಯ್ದುಕೊಂಡಿದ್ದ ಕಲ್ಯಾಣಿ ರಾಗವನ್ನು ವಿಸ್ತಾರವಾಗಿ ಆಲಾಪನೆ ಮಾಡಿ ಶ್ಯಾಮಾ ಶಾಸ್ತ್ರಿಗಳ ''ಹಿಮಾದ್ರಿಸುತೇ''ಯನ್ನು ನೆರವಲ್, ಕಲ್ಪನಾ ಸ್ವರ ಗಳೊಂದಿಗೆ ವಿದ್ವತ್ಪೂರ್ಣವಾಗಿ ಸಾದರ ಪಡಿಸಿದುದು ಮುಂದೆ ತಮಗೆ ಉತ್ತಮ ಭವಿಷ್ಯವಿದೆ ಎಂಬುದನ್ನು ಸೂಚಿಸುತ್ತಿತ್ತು. ಎಸನೀರು ಮಠಾಧೀಶ ಶ್ರೀ ಕೇಶವಾನಂದ ಭಾರತಿಯವರ ಕೃತಿ ಮಲೆಯಾಳಿಯ ''ಗುರುವಾಯೂ ರಪ್ಪನ್ ಶರಣು'' (ರೀತಿಗೌಳ) ಹಾಡಿದುದು ಸಂದರ್ಭೋಚಿತವಾಗಿತ್ತು. ಮರಾಠಿ ಅಭಂಗ, ತಿಲ್ಲಾನ, ಶ್ರೀರಾಗದ ನವಾವರ್ಣ ಕೃತಿಗಳೂ ಸಹ ಉತ್ತಮವಾಗಿ ಮೂಡಿ ಬಂದುವು.

ಪಕ್ಕವಾದ್ಯದಲ್ಲಿ ಡಾ. ಯೋಗಾನಂದನ್ ಪಿಟೀಲಿನಲ್ಲಿ, ಕಲಾಲಯಂ ನಂಬೀಶನ್ ಮೃದಂಗ ದಲ್ಲಿ ಉತ್ತಮವಾಗಿ ಸಹಕರಿಸಿ ಯುವ ಕಲಾವಿದರ ಸಂಗೀತ ಕಚೇರಿ ಕಳೆಗಟ್ಟುವಂತೆ ಮಾಡಿದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938